XV) **Schedule G- Open Space cost (F.D)** (ಖುಲ್ಲಾ ನಿವೇಶನದ ಮುದ್ದತ ಠೇವಣಿಗಳು) ರೂ. **16,95,33,718.61** ಎಂದು ತೋರಿಸಿದ್ದು, ಹಿಂದಿನ ಅವಧಿಯ ಲೆಕ್ಕ ಪರಿಶೋಧನೆ ವರದಿಯಲ್ಲಿ ತಿಳಿಸಿದಂತೆ, ಪ್ರಾಧಿಕಾರ ಯಾವ ಉದ್ದೇಶಕ್ಕೆ ಮೊತ್ತವನ್ನು ಸಂಗ್ರಹಿಸಿದೆಯೋ ಆ ಉದ್ದೇಶಕ್ಕೆ ಸದರಿ ಮೊತ್ತ ಉಪಯೋಗಿಸದೇ ಠೇವಣಿ ಇರಿಸಲಾಗಿದೆ. ಈ ಕುರಿತು ವಿವರಣೆ ನೀಡಿಲ್ಲ.

XVI) **Schedule H- III) Sundry debtors** ಎಂದು ರೂ.384516/– ಎಂದು ತೋರಿಸಿದ್ದು, **Schedule** ನೀಡಿಲ್ಲ. **Receipt & Payment** ತಖ್ತೆಯಲ್ಲಿ ಈ ಮೊತ್ತವನ್ನು ಏಕೆ ಪರಿಗಣಿಸಿಲ್ಲಾ ಎಂಬ ಬಗ್ಗೆ ವಿವರಣೆ ನೀಡಿಲ್ಲ.

Receipt & Payment ತಃಖ್ತೆ :–

XVII) ರಸೀದಿ/ ಜಮೆ ಕಾಲಂನಲ್ಲಿ ಬ್ಯಾಂಕ್ ಖಾತೆಗಳ ಅಂತಿಮ ಶುಲ್ಕ ರೂ. **2,80,802.86** ಹಾಗೂ ಬ್ಯಾಂಕ್ ಚಾರ್ಜ ರೂ.180/– ಎಂದು ತೋರಿಸಿದ್ದು, ಈ ಕುರಿತು ಸೂಕ್ತ ದಾಖಲೆಗಳನ್ನು ನೀಡಿಲ್ಲ. ಈ ಮೇಲಿನ ಎಲ್ಲಾ ಅಂಶಗಳು/ನ್ಯೂನತೆಗಳ ಕುರಿತು ಸಮರ್ಪಕ ಮಾಹಿತಿ ಕೋರಿ ನೀಡಲಾದ ಲೆಕ್ಕ ಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ: 9 ದಿ: 17.01.2019 ಹಾಗೂ ವಿಚಾರಣೆ ಪತ್ರ ಸಂಖ್ಯೆ:30 ದಿ:21.01.2019 ಕ್ಕೆ ನೀಡಿದ ಅನುಸರಣೆಯಲ್ಲಿ ಈ ಮೇಲಿನ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲಾಗುವುದು ಹಾಗೂ ವ್ಯತ್ಯಾಸ ಇದ್ದಲ್ಲಿ, ಪುನಃ ಪರಿಶೀಲಿಸಿ ಕ್ರಮ ಕೈಕೊಳ್ಳಲಾಗುವುದು ಎಂದು ತಿಳಿಸಿದ್ದು, ವಾರ್ಷಿಕ ಲೆಕ್ಕ ಪತ್ರದ **Receipt & Payment, Income & expenditure and Balancesheet** ಗಳಲ್ಲಿ ಸೂಚಿಸಿದ ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿ ಅಳವಡಿಸಿ ಪ್ರಾಧಿಕಾರದ ಘಟನೋತ್ತರ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿದೆ.

9) ಪ್ರಾಧಿಕಾರ ಆದಾಯ ಮತ್ತು ಖರ್ಚಿನ ತಃಖ್ತೆಯಲ್ಲಿ ವೆಚ್ಚ ಭರಿಸಿದ ಕುರಿತು :

2017–18ನೇ ಸಾಲಿನ ಆದಾಯ ವೆಚ್ಚದ ತಃಖ್ತೆಯ ಪ್ರಕಾರ **Beautification and other development** ಎಂದು ರೂ. **67250000**/– ವೆಚ್ಚ ಭರಿಸಲಾಗಿದೆ. ಆದರೆ ಬ್ಯಾಲೆನ್ಸ್ ಶೀಟ್ ಪ್ರಕಾರ ಸದರಿ ಮೊತ್ತವನ್ನು ಪ್ರಾವಿಜನ್ಸ್ ಅಡಿಯಲ್ಲಿ ತೋರಿಸಿದ್ದು, ಪ್ರಸ್ತುತ ಸಾಲಿನಲ್ಲಿ ಈ ವೆಚ್ಚವನ್ನು ಭರಿಸಿರುವುದಿಲ್ಲ ಎಂದು ಪ್ರಾವಿಜನ್ಸ್ ತಃಖ್ತೆಯಲ್ಲಿ ತೋರಿಸಿಲ್ಲ. ಆದರೆ **Income and Expenditure** ತಃಖ್ತೆಯಲ್ಲಿ ಸದರಿ ಮೊತ್ತವನ್ನು ವೆಚ್ಚವೆಂದು ಪರಿಗಣಿಸಲಾಗಿದೆ. ಪ್ರಾಧಿಕಾರಕ್ಕೆ ಈ ತರಹದ ಪ್ರೋವಿಜನಲ್ ವೆಚ್ಚಗಳಿಂದ ಅಕ್ಯೂಮಲೆಟೇಡ್ ಲಾಸ್ ಹೆಚ್ಚಿಗೆ ತೋರಿಸಿದಂತಾಗಿರುತ್ತದೆ ಎಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯಿಸಲಾಗಿದೆ.

10) 2017–18ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕ ಪತ್ರದಲ್ಲಿ ಆದಾಯ ತೆರಿಗೆ ಕಾಯ್ದೆ 1981 ಸೆಕ್ಷನ 44ಎಬಿ ಪ್ರಕಾರ ಟಿ.ಡಿ.ಎಸ್. ಪಾವತಿ ಮೇಲೆ ಬಡ್ಡಿ ಕುರಿತು. :

2017–18ನೇ ಸಾಲಿನಲ್ಲಿ ವಾರ್ಷಿಕ ಲೆಕ್ಕ ಪತ್ರದಲ್ಲಿ ಟಿ.ಡಿ.ಎಸ್. ಮೊತ್ತದ ಮೇಲೆ ರೂ. **32161**/– ಬಡ್ಡಿ ಮೊತ್ತ ಎಂದು ದಂಡವನ್ನು ಆದಾಯ ತೆರಿಗೆ ಕಾಯ್ದೆ **1961** ಸೆಕ್ಷನ್ **44**ಎಬಿ ಪ್ರಕಾರ ಭರಿಸುವುದಾಗಿ ಕಂಡುಬರುತ್ತದೆ.

ಈ ಬಡ್ಡಿ ಮೊತ್ತ ಭರಿಸಲು ಪ್ರಾಧಿಕಾರದ ಅನುಮೋದನೆ ಪಡೆದ ಬಗ್ಗೆ ಸೂಕ್ತ ದಾಖಲೆ ಹಾಗೂ ಯಾವ ಕಾರಣಗಳಿಂದ ಈ ಬಡ್ಡಿ ಮೊತ್ತ ಸಂದಾಯ ಮಾಡಬೇಕಾಯಿತು ಎಂಬ ಬಗ್ಗೆ ಮಾಹಿತಿ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:07 ದಿನಾಂಕ:17.01.2019ಕ್ಕೆ ನೀಡಿದ ಅನುಸರಣೆಯಲ್ಲಿ ಆದಾಯ ತೆರಿಗೆ ಬಡ್ಡಿ 2007–08 ರಿಂದ ಬಾಕಿ ಇರುವುದಾಗಿ ತಿಳಿಸುತ್ತಾ ಪ್ರಸ್ತುತ ಸಾಲಿನಲ್ಲಿ ಭರಣಾ ಮಾಡಲಾಗಿದೆ ಎಂದು ದಾಖಲಿಸಲಾಗಿದೆ. ಸುಮಾರು 10 ವರ್ಷಗಳ ಕಾಲ ಈ ಮೊತ್ತ ಭರಣ ಮಾಡದೇ ಬಾಕಿ ಉಳಿಸಿದ್ದು, ಲೆಕ್ಕಪತ್ರ ನಿರ್ವಹಣೆಯಲ್ಲಿನ ತೀವ್ರ ನ್ಯೂನತೆಯಾಗಿದೆ. ಈ ಆದಾಯಕರವನ್ನು 2007–08 ನೇ ಸಾಲಿನಲ್ಲಿಯೇ ಭರಣ ಮಾಡದೇ ವಿಳಂಬ ಮಾಡಿ ಆ ಮೂಲಕ ಪ್ರಾಧಿಕಾರಕ್ಕೆ ಅನವಶ್ಯಕ ಆರ್ಥಿಕ ಹೊರೆ ಉಂಟು ಮಾಡಿದ ಸಂಬಂಧಪಟ್ಟ ಸಿಬ್ಬಂದಿಯಿಂದ ಈ ಮೊತ್ತವನ್ನು ವಸೂಲಿಸಿ ಸಂಸ್ಥೆಗೆ ಜಮೆ ಮಾಡುವವರೆಗೆ ರೂ.32,161/– ಗಳನ್ನು ವಸೂಲಿಯಲ್ಲಿಡಲಾಗಿದೆ.

11) 2017–18ನೇ ಸಾಲಿನಲ್ಲಿ ಪ್ರಾಧಿಕಾರ ಶಾಸನಬದ್ದ ಹಾಗೂ ಸಿ.ಬಿ.ಎಫ್. ಮೊತ್ತ ಸಂಬಂಧಿಸಿದ ವಿಭಾಗಕ್ಕೆ ಭರಿಸದೇ ಇರುವ ಬಗ್ಗೆ.

2017–18ನೇ ಸಾಲಿನಲ್ಲಿ ಪ್ರಾಧಿಕಾರದ ಈ ಕೆಳಕಂಡ ಶಾಸನಬದ್ದ ತೆರಿಗೆ ಹಾಗೂ ಸಿ.ಬಿ.ಎಫ್. ಮೊತ್ತ ಸಂಬಂಧಿಸಿದ ಪ್ರಾಧಿಕಾರಗಳಿಗೆ/ ಇಲಾಖೆಗೆ ಭರಣಾ ಮಾಡದೇ ಇರುವುದು ಕಂಡುಬರುತ್ತದೆ. ವಿವರ ಈ ಕೆಳಗಿನಂತಿರುತ್ತದೆ. **(As per Annual Accounts documents)**.

1) ಸಿ.ಜಿ.ಎಸ್.ಟಿ. ರೂ. **49271.00**
2) ಎಸ್.ಜಿ.ಎಸ್.ಟಿ. ರೂ. **49271.00**
3) ಸಿ.ಬಿ.ಎಫ್. ರೂ. **148269.00**

ಈ ಕುರಿತು ಸೂಕ್ತ ಅನುಸರಣೆ ನೀಡಲು ವಿಚಾರಣಾ ಪತ್ರ ಸಂಖ್ಯೆ: 08 ದಿನಾಂಕ:17.01.2019ಕ್ಕೆ ನೀಡಿದ ಅನುಸರಣೆ ಆಕ್ಷೇಪಣೆಗೆ ಅನುಗುಣವಾಗಿಲ್ಲ. ಕಾರಣ ಕಂಡಿಕೆ ಮುಂದೆವರಿಸುತ್ತಾ ಒಟ್ಟು ರೂ.246811/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

12) ಮುಂಗಡ ವ್ಯವಹಾರಗಳ ಬಗ್ಗೆ:–

ಪ್ರಸಕ್ತ ಸಾಲಿನ ಮುಂಗಡಗಳ ವ್ಯವಹಾರದ ವಿವರ ಇಂತಿದೆ.

1)	ಪ್ರಾರಂಭಿಕ ಶಿಲ್ಕು	ರೂ.	**38,10,009.00**
2)	2017–18 ರಲ್ಲಿ ಮುಂಗಡ ನೀಡಿದ್ದು (ವಾಹನ ದುರಸ್ತಿಗೆ ಪಾವತಿಸಿದ್ದಾರೆ)	ರೂ.	**1,51,000.00**
	ಒಟ್ಟು	ರೂ.	**39,61,009.00**
4)	2017–18 ರಲ್ಲಿ ಮುಂಗಡ ಹೊಂದಾಣಿಕೆ (ವಾಹನ ದುರಸ್ತಿ)	ರೂ.	**1,51,000.00**
5)	ಅಂತಿಮ ಶಿಲ್ಕು	ರೂ.	**38,10,009.00**

ಸದರಿ ಮುಂಗಡ ರಜಿಸ್ಟರನ್ನು ಪರಿಶೀಲಿಸಲಾಗಿ ರಜಿಸ್ಟರದಲ್ಲಿ ಅಂತಿಮ ಶಿಲ್ಕು ರೂ.38,10,009/– ಗಳು ಬಾಕಿ ಇದ್ದು, ಈ ಬಗ್ಗೆ ಯಾವುದೇ ವಿವರಣೆ ಹಾಜರಪಡಿಸಿಲ್ಲ. 2014–15 ನೇ ಸಾಲಿನ ಅಂತ್ಯಕ್ಕೆ ಹಾಗೂ 2015–16 ರ ಆರಂಭಿಕ ಶಿಲ್ಕು ರೂ.37,40,009/– ಬಾಕಿ ಇರುವುದಾಗಿ ದಾಖಲಿಸಿದ್ದು, 2016–17 ನೇ ಸಾಲಿನ ಅಂತ್ಯಕ್ಕೆ ಶಿಲ್ಕು ರೂ.38,10,009/– ಎಂದು ತೆಗೆದುಕೊಂಡ ಬಗ್ಗೆ ಯಾವುದೇ ಪೂರಕ ಮಾಹಿತಿ ಹಾಜರುಪಡಿಸಿಲ್ಲ. ಕಾರಣ 2017–18 ರ ಮುಂಗಡ ಅಂತಿಮ ಶಿಲ್ಕುದ ವಿವರವನ್ನು ದೃಢೀರಿಸಲು ಸಾಧ್ಯವಿಲ್ಲ. ಅಲ್ಲದೇ **Charted Accountant** ರವರು ತಯಾರಿಸಿದ ಲೆಕ್ಕಪತ್ರದ ಬ್ಯಾಲನ್ಸ ಶೀಟ್‌ನಲ್ಲಿ ಸಹ ಈ ಮೊತ್ತವು ಇಲ್ಲದೆ ಇರುವುದು ವ್ಯಕ್ತವಾಗುತ್ತದೆ. ಈ ಕುರಿತು ಹಿಂದಿನ ಲೆಕ್ಕಪರಿಶೋದನೆಯಲ್ಲಿ ತಿಳಿಸಿದ್ದರೂ ಸಹ ಯಾವುದೇ ಕ್ರಮ ಜರುಗಿಸದಿರುವುದು ಆಕ್ಷೇಪಾರ್ಹ ದೊಡ್ಡ ಮೊತ್ತದ ಬಾಕಿ ಹೊಂದಾಣಿಕೆ ತೋರಿಸುತ್ತಿರುವುದರಿಂದ ಈ ಕುರಿತು ವೈಯಕ್ತಿಕ ಗಮನಹರಿಸಿ ಈ ಮೊತ್ತದ ಹೊಂದಾಣಿಕೆ ಮಾಡಿಕೊಳ್ಳಲು ಅಥವಾ ಸಂಬಂಧಪಟ್ಟವರಿಂದ ವಸೂಲಿಸಲು ತಿಳಿಸಿದೆ.

13) ಗೃಹ ನಿರ್ಮಾಣದ ಮುಂಗಡ ಕುರಿತು :

ಸದರ ವಹಿಯನ್ನು ನಿರ್ವಹಿಸಲಾಗಿದೆ. ಶ್ರೀ ಸೋಮಪ್ಪ ಹೊಂಡಪ್ಪನ್ನವರ ಇವರಿಗೆ ಮಂಜೂರ ಮಾಡಿದ ಮೊತ್ತ ರೂ.5,00,000/– ಗಳ ಮುಂಗಡದಲ್ಲಿ ಇನ್ನೂ ವಸೂಲಿ ಮಾಡಬೇಕಾದ ಮೊತ್ತ ರೂ.2,63,870/– ಮತ್ತು ಬಡ್ಡಿ ರೂ.1,58,330/– ಗಳು ಒಟ್ಟಾರೆ ರೂ.4,22,200/– ಗಳು ಬಾಕಿ ಇದ್ದು ವಸೂಲಿ ಮಾಡಲು ಸೂಚಿಸಲಾಗಿದೆ. ವಿವರಗಳನ್ನು ಅನುಬಂಧ–03 ರಲ್ಲಿ ಲಗತ್ತಿಸಲಾಗಿದೆ.

14) ಠೇವಣಿಗಳು :

2017–18ನೇ ಸಾಲಿಗೆ ಸಂಬಂಧಿಸಿದಂತೆ ಠೇವಣಿ ರಜಿಸ್ಟರ್‌ನ್ನು ನಿರ್ವಹಿಸಿಲ್ಲ. ಸದರಿ ವಹಿಯನ್ನು ನಿರ್ವಹಿಸದೇ ಇರುವುದಕ್ಕೆ ಸೂಕ್ತ ಅನುಸರಣೆ ನೀಡಲು ಸೂಚಿಸಿದೆ. ಹಾಗೂ ಪ್ರಾಧಿಕಾರದಿಂದ ನೀಡಿದ ಮಾಹಿತಿಯನ್ನು ಈ ಕೆಳಗಿನಂತಿದೆ.

ಕ್ರ.ಸಂ.	ವಿವರ	ಮೊತ್ತ
1	ಆರಂಭಿಕ ಶಿಲ್ಕು	610335197
2	2017–18 ರಲ್ಲಿಯ ಹೂಡಿಕೆ	–
3	ಬಡ್ಡಿ	103744518
4	ಒಟ್ಟು	714079715
5	2017–18 ರಲ್ಲಿ ಠೇವಣಿ ಮುರಿಸಿದ್ದು	–
6	ಅಂತಿಮ ಶಿಲ್ಕು	714079715

ಅನುಬಂಧ–04 ರಲ್ಲಿ ವರದಿಗೆ ಲಗತ್ತಿಸಿದೆ.

ಅ) ಪ್ರಾಧಿಕಾರದ ರಾಜಸ್ವ ಮೊತ್ತಗಳನ್ನು ಮುದ್ದತು ಠೇವಣಿ ಮಾಡಿದ ಕುರಿತು.

ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ–1987 ರ ನಿಯಮ 50 ರನ್ವಯ ಪ್ರಾಧಿಕಾರದ ಸಾಮಾನ್ಯ ನಿಧಿ, ಬಯಲು ಜಾಗೆ ಹಾಗೂ ಕೆರೆ ಅಭಿವೃದ್ಧಿ ಶುಲ್ಕಗಳ ಮೊತ್ತಗಳನ್ನು ವಿವಿಧ ಬ್ಯಾಂಕ್‌ಗಳಲ್ಲಿ ಮುದ್ದತ ಠೇವಣಿಯಾಗಿ ಹೂಡಿಕೆ ಮಾಡಿದ ಕುರಿತ ಎಲ್ಲ ದಾಖಲೆಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿದೆ. ಆದರೆ ಸದರಿ ಠೇವಣಿಗಳನ್ನು ಬೇರೆ ಬೇರೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬಡ್ಡಿಯ ಕುರಿತು ದರಪಟ್ಟಿಗಳನ್ನು ಪಡೆದು ಹೆಚ್ಚು ಬಡ್ಡಿ ನೀಡುವ ಕಡೆ ಹೂಡಿಕೆ ಮಾಡಲಾಗಿದೆಯೇ ಎಂಬ ಕುರಿತು ವಿವರಣೆ ಕೋರಿದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 18 ದಿನಾಂಕ 21.01.2019 ಕ್ಕೆ ಪ್ರಾಧಿಕಾರದಿಂದ ನೀಡಿದ ಅನುಸರಣೆ ನೀಡಿಲ್ಲ.

ಈ ಮುದ್ದತ ಠೇವಣಿಗಳ ಹೂಡಿಕೆ ಕುರಿತು ದರಪಟ್ಟಿ ಮುಖಾಂತರ ಠೇವಣಿಗಳನ್ನು ಹೂಡಿಕೆ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸರ್ಕಾರದ ಆದೇಶ ಸಂ:ಡಿಪಿಇ 30 ಎಆರ್‌ಯು 2010 ದಿ: 19.06.2012 ಕ್ರ.ಸಂ.12 (iii) ಅನ್ವಯ ಕ್ರಮ ಜರುಗಿಸಿ ಹೆಚ್ಚಿನ ಆದಾಯ ಗಳಿಸಬಹುದಾಗಿದ್ದು, ಆದರೆ ಗಳಿಸಲು ವಿಫಲವಾಗಿದೆ. ಅಲ್ಲದೇ ಠೇವಣಿಗಳ ಕುರಿತು **Bank Confirmation** ಮಾಡಿಕೊಂಡ ಮಾಹಿತಿ ಹಾಜರುಪಡಿಸಿಲ್ಲಾ.

ಬ) ಖಾಸಗಿ ವಿನ್ಯಾಸಗಳ ಅನುಮೋದನೆಯಲ್ಲಿ ವಸೂಲಿಸಿದ ಖುಲ್ಲಾ ಜಾಗಾ ಮೊತ್ತವನ್ನು ನಿಯಮಾನುಸಾರ ವಿನಿಯೋಗಿಸದೇ ಬ್ಯಾಂಕಿನಲ್ಲಿ ಮುದ್ದತ ಠೇವಣಿ ಮಾಡಿರುವ ಕುರಿತು :–

ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1967 ಅನುಚ್ಛೇದ 12 ರ (ಸಿ)ದಲ್ಲಿ ತಿಳಿಸಿದಂತೆ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಉದ್ಯಾನವನ ಮತ್ತು ಬಯಲು ಜಾಗೆಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಕುರತು ಅನುಚ್ಛೇದ 69 ರಲ್ಲಿ ತಿಳಿಸಲಾಗಿದೆ.

ಮುಂದುವರೆದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಇ 522 ಮೈಅಪ್ರಾ 2005 ದಿ.10.03.2006ರಲ್ಲಿ ತಿಳಿಸಿದಂತೆ ಭೂ ವಿಭಜನೆ ಮಾಡುವಾಗ ಬಯಲು ಜಾಗೆ ಮತ್ತು ನಾಗರೀಕ ಸೌಲಭ್ಯಗಳ ವಿನಾಯತಿ ಸಂಬಂಧವಾಗಿ ಖಾಸಗಿ ಮಾಲೀಕರು ಪ್ರಾಧಿಕಾರಕ್ಕೆ ಭರಿಸುವ ಹಣವನ್ನು ಮಾಸ್ಟರ್ ಪ್ಲ್ಯಾನ್‌ನಲ್ಲಿ ಕಾಯ್ದಿರಿಸಿದ ಉದ್ಯಾನವನ ಮತ್ತು ಬಯಲು ಜಾಗಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಮಾತ್ರ ಬಳಸಿಕೊಳ್ಳತಕ್ಕದ್ದು ಹಾಗೂ ಪ್ರಾಧಿಕಾರವು ಯಾವುದೇ ಕಾರಣಕ್ಕೂ ಈ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಬಾರದು ಎಂದು ಸಹ ತಿಳಿಸಲಾಗಿದೆ.

ಆದಾಗ್ಯೂ 31.03.2018 ರ ಅಂತ್ಯಕ್ಕೆ ಖುಲ್ಲಾ ಜಾಗೆ ವಿನಾಯತಿ ಮೊತ್ತ ರೂ.235028592/- ಗಳನ್ನು ವಿವಿಧ ಬ್ಯಾಂಕ್‌ಗಳಲ್ಲಿ ಮುದ್ದತ ಠೇವಣಿ ಮಾಡಲಾಗಿದ್ದು, ಸದರಿ ಹಣವನ್ನು ಪ್ರಾಧಿಕಾರದಿಂದ ಸಮರ್ಪಕ ಉದ್ದೇಶಕ್ಕೆ ಬಳಕೆ ಮಾಡಲಾಗಿಲ್ಲ. ಕಾರಣ ಸಮರ್ಪಕ ಉದ್ದೇಶಕ್ಕೆ ಬಳಸದೇ ಮುದ್ದತ ಠೇವಣಿ ಇಟ್ಟ ಮೊತ್ತ ರೂ. 235028592/- ಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ.

1. ಸಾಮಾನ್ಯ ಮುದ್ದತ ಠೇವಣಿ – 46
2. ಬಯಲು ಜಾಗೆ ಶುಲ್ಕ ಮುದ್ದತ ಠೇವಣಿ – 45 ಹಾಗೂ
3. ಕೆರೆಗಳ ಅಭಿವೃದ್ಧಿ ಶುಲ್ಕ ಮುದ್ದತ ಠೇವಣಿ – 5

15) ಶಾಸನಬದ್ಧ ತೆರಿಗೆಗಳನ್ನು ಭರಣಾ ಮಾಡಿರುವ ಕುರಿತು:-

2017-18ನೇ ಸಾಲಿನ ಕಾಮಗಾರಿ ಬಿಲ್ಲುಗಳಲ್ಲಿ ಕಡಿತಗೊಳಿಸಿದ ಹಾಗೂ ಸರ್ಕಾರಕ್ಕೆ ಭರಣಾ ಮಾಡಿದ ತೆರಿಗೆ ವಿವರ ಈ ಕೆಳಗಿನಂತಿದೆ.

ಕ್ರ. ಸಂ	ವಿವರ	ಆದಾಯ ತೆರಿಗೆ					ಗುತ್ತಿಗೆದಾರರ ಕಲ್ಯಾಣ ನಿಧಿ	ಮಾರಾಟ ಕರ	ಕಾರ್ಮಿಕ ಕಲ್ಯಾಣ ನಿಧಿ	ರಾಜಧನ
		ಟಿಡಿಎಸ್ 94ಜೆ	ಟಿಡಿಎಸ್ 94ಸಿ	ಟಿಡಿಎಸ್ ಜಾಹಿರಾತು 94ಸಿ	ಟಿಡಿಎಸ್ 92ಎ					
1	01-04-2017 ರ	17835	84682	1827	0	0	157153	2285396	80854	5235
2	2017-18 ರಲ್ಲಿ ಕಡಿತಗೊಳಿಸಿದ್ದು	261320	1262452	16634	49271	49271	40869	1094752	2569553	708730
3	ಒಟ್ಟು	279155	1347134	18461	40271	49271	198022	3380148	2650407	713965
4	2017-18 ರಲ್ಲಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಭರಣಾ ಮಾಡಿದ್ದು	261320	1262452	16634	49271	49271	37394	1094752	2544202	715585
5	ದಿನಾಂಕ: 31-03-2018 ಕ್ಕೆ ಶಿಲ್ಕು	17835	84682	1827	0	0	160628	2285396	106205	–
6	ಪ್ರಸಕ್ತ ಸಾಲಿನ ಶಿಲ್ಕು	–	–	–	–	–	3475	–	25351	–

ಶಾಸನಬದ್ಧ ತೆರಿಗೆಗಳನ್ನು ಹಿಂದಿನ ಅವಧಿಗಳಿಂದಲೂ ಈ ಮೇಲೆ ತೋರಿಸಿದಂತೆ ಉಳಿಸಿಕೊಂಡು ಬರಲಾಗಿದೆ. ಸರ್ಕಾರಕ್ಕೆ ಭರಣಾ ಮಾಡುವ ಮೊತ್ತಗಳನ್ನು ನಿಗದಿತ ಅವಧಿಯಲ್ಲಿ ಭರಣಾ ಮಾಡಲು ನಿರ್ದೇಶನವಿದ್ದರೂ ಸಹ ಇಷ್ಟು ದೊಡ್ಡಮೊತ್ತದ ತೆರಿಗೆಗಳನ್ನು ಬಾಕಿ ಉಳಿಕೊಂಡಿರುವುದು ಸಮಂಜಸವಲ್ಲ. ಕಾರಣ ಹಿಂದಿನ ಬಾಕಿ ಹಾಗೂ ಪ್ರಸಕ್ತ ಸಾಲಿನ ಬಾಕಿ ಮೊತ್ತವನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಗೆ ಭರಣಾ ಮಾಡುವವರೆಗೆ ಪ್ರಸ್ತುತ ಸಾಲಿನ ಬಾಕಿ ಮೊತ್ತ ರೂ.28,826/- ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

16) ಉಪಕರಗಳನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿರುವ ಕುರಿತು :–

2017–18 ನೇ ಸಾಲಿನಲ್ಲಿ ವಸೂಲಿಯಾದ ಉಪಕರಗಳು ಹಾಗೂ ಸರ್ಕಾರಕ್ಕೆ ಸಂದಾಯ ಮಾಡಿದ ಹಾಗೂ ದಿನಾಂಕ:31–03–2018 ರ ಅಂತ್ಯಕ್ಕೆ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಸಂದಾಯಕ್ಕೆ ಬಾಕಿ ಇರುವ ಉಪಕರಗಳ ವಿವರ ಇಂತಿದೆ.

ಅ. ನಂ	ವಿವರಗಳು	ಆರೋಗ್ಯ ಕರ	ವಾಚನಾಲಯ ಕರ	ಭಿಕ್ಷುಕ ಕರ
1	2017–18 ರಲ್ಲಿ ವಸೂಲಿ ರೂ.	409223	166360	85001
2	ಶೇ. 10% ವಸೂಲಿ ಚಾರ್ಜ ಕಡಿತ ರೂ.	409922	16636	8500
3	ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕಾದ ಮೊತ್ತ	368300	149724	76501
4	ಹಿಂದಿನ ಸಾಲಿನ ಬಾಕಿ ರೂ.	239382	–	–
	ಒಟ್ಟು	607682	149724	76501
5	2017–18 ರಲ್ಲಿ ಸರ್ಕಾರಕ್ಕೆ ಭರಣಾ	607682	149724	76501
6	2017–18 ರ ಅಂತ್ಯಕ್ಕೆ ಸರ್ಕಾರದ ಸಂದಾಯಕ್ಕೆ ಬಾಕಿ ರೂ.	–	–	–
7	31.03.2018 ನಂತರ ಭರಣಾ ಮಾಡಿದ ಮೊತ್ತ.	–	–	2295

17) ವಿಶೇಷ ನೀರಿನ ಕರ ಬಗ್ಗೆ:

ಪ್ರಸಕ್ತ ಸಾಲಿನಲ್ಲಿ ವಿಶೇಷ ನೀರಿನಕರದ ಬೇಡಿಕೆ ರಜಿಸ್ಟರ ಪರಿಶೀಲಿಸಲಾಗಿ ವಿವರ ಈ ಕೆಳಗಿನಂತಿದೆ.

ಅ.ನಂ	ವಿವರಗಳು	ಆರೋಗ್ಯ ಕರ
1	ಹಿಂದಿನ ಬಾಕಿ	998955
2	ಪ್ರಸಕ್ತ ಸಾಲಿನ ಬೇಡಿಕೆ	4312500
3	ಒಟ್ಟು ಬೇಡಿಕೆ	5311455
4	ವಸೂಲಾತಿ	4758798
5	ಅಂತಿಮ ಶಿಲ್ಕು	552657

ಈ ಬಗ್ಗೆ ಡಿಸಿಬಿ ವಹಿ ನಿರ್ವಹಿಸಿಲ್ಲ. ಈ ಬಗ್ಗೆ ಕ್ರಮಕೈಗೊಳ್ಳಲು ಸೂಚಿಸಿದೆ.

18) ವಾಣಿಜ್ಯ ಮಳಿಗೆ ಬಾಡಿಗೆ ಬಗ್ಗೆ:–

ಪ್ರಾಧಿಕಾರದ ಅಧೀನದಲ್ಲಿ ಯೋಜನೆ ಸಂಖ್ಯೆ:13 ದೂರದರ್ಶನ ಕೇಂದ್ರದಲ್ಲಿ 20 ವಾಣಿಜ್ಯ ಮಳಿಗೆಗಳಿದ್ದು, ಇವುಗಳಲ್ಲಿ ಎಲ್ಲಾ 20 ಮಳಿಗೆಗಳು ಖಾಲಿ ಇದ್ದುದ್ದಾಗಿ ತಿಳಿಸಿರುತ್ತಾರೆ. ಮಹಾನಗರ ಪಾಲಿಕೆ ವ್ಯಾಪ್ತಿಯ ಈ ನಗರದಲ್ಲಿ ಆರ್ಥಿಕ ಆದಾಯ ತರುವಂತಹ ಈ ಮಳಿಗೆಗಳನ್ನು ಬಾಡಿಗೆ ನೀಡದೇ ಹಾಗೆ ಉಳಿಸಿ, ಆರ್ಥಿಕ ನಷ್ಟಕ್ಕೆ ಕಾರಣರಾದವರ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸುವುದು ಅಗತ್ಯ ಎಂದು ಲೆಕ್ಕ ಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ. ಪ್ರಾಧಿಕಾರದ

ಆಡಳಿತವು ಈಗಾಗಲಾದರೂ ಸದರಿ ಮಳಿಗೆಗಳನ್ನು ನಿಯಮಾನುಸಾರ ಹರಾಜು ಮೂಲಕ ಬಾಡಿಗೆ ರೂಪದಲ್ಲಿ ವಿತರಿಸಿ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ಸೂಚಿಸಿದೆ. ಕಡತಗಳನ್ನು ಪರಿಶೀಲಿಸಲಾಗಿ ವಿವರ ಈ ಕೆಳಗಿನಂತಿದೆ.

ಅ.ನಂ.	ಖಾಲಿ ಇರುವ ಮಳಿಗೆಗಳ ಸಂಖ್ಯೆ
1)	13
2)	22
3)	23
4)	24
5)	25
6)	26
7)	28
8)	29
9)	34 ಮತ್ತು 35
10)	36 ಮತ್ತು 37
11)	38
12)	39
13)	40
14)	46
15)	47
16)	53
17)	54
18)	55
19)	56
20)	57

19) ಕೊಳಚೆ ನಿರ್ಮೂಲನಾ ಕರ:–

ಸರ್ಕಾರದ ತಿದ್ದೋಲೆ ಪತ್ರ ಸಂಖ್ಯೆ: ಸಅಇ/912/ಎಮ್.ಆಯ್.ಬಿ./95/08–07–1996 ರ ಪ್ರಕಾರ ಸನ್ 2010–11 ರಿಂದ 2017–18 ರ ವರೆಗೆ ಈ ಕೆಳಗಿನಂತೆ ಶೇ. 30% ರಷ್ಟು ಸ್ಲಂ ಕರ ವಸೂಲಿ ಮಾಡಲಾಗಿದೆ.

ಕ್ರ.ಸಂ.	ವರ್ಷ	ಒಟ್ಟು ವಸೂಲಿ	ಶೇ. 70% ಮೊತ್ತ	ಶೇ. 30% ಮೊತ್ತ
1	2010–11	277771.00	194440.00	83331.00
2	2011–12	267712.00	187398.00	80314.00
3	2012–13	271400.00	189980.00	81420.00
4	2013–14	198749.00	139124.00	59625.00
5	2014–15	198975.00	139283.00	59692.00
6	2015–16	468148.00	327704.00	140444.00
7	2016–17	388521.00	271965.00	116556.00
8	2017–18	477151.00	334006.00	143145.00
	ಒಟ್ಟು	2548427.00	1783900.00	764527.00

ಸದರಿ ಸುತ್ತೋಲೆ ಪ್ರಕಾರ ಶೇ.70% ರ ಮೊತ್ತದಲ್ಲಿ ರೂ.3,34,006/– ಗಳ ಮೊತ್ತವನ್ನು ಡಿ.ಡಿ. ನಂ. 35483623 ದಿ: 26.03.2018 ಹಾಗೂ ಡಿಡಿ ಸಂ. 483695 ದಿ: 06.04.2018 ರ ಪ್ರಕಾರ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರಿಗೆ ಭರಣಾ ಮಾಡಲಾಗಿದೆ. ಆದರೆ ಇನ್ನುಳಿದ ಶೇ. 30% ರಷ್ಟರ ಮೊತ್ತ ರೂ.1,43,145/– ಗಳನ್ನು ಪ್ರಾಧಿಕಾರದ ವ್ಯಾಪ್ತಿಗೆ ಬರುವ ಸ್ಲಂ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಬಳಕೆ ಮಾಡಿಕೊಳ್ಳದೆ ಶಿಲ್ಕು ಉಳಿಸಿಕೊಂಡು ಬರಲಾಗಿದೆ. ಇದರ ಬಗ್ಗೆ ಹಿಂದಿನ 2016–17 ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿಸಿದ್ದರೂ, ಈ ಕುರಿತು ಅಗತ್ಯ ಕ್ರಮ ಕೈಗೊಂಡಿರುವುದಿಲ್ಲ. ಕಾರಣ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ತಯಾರಿಸಿ ಪ್ರಾಧಿಕಾರದ ಅನುಮೋದನೆ ಪಡೆದು ಆರ್ಥಿಕ ನಿಯಮಗಳ ಅನುಸಾರ ವಿನಿಯೋಗಿಸಲು ಸೂಚಿಸಿದೆ.

20) ಕಟ್ಟಡ ಪರವಾನಿಗೆ ಅರ್ಜಿಗಳು ಸ್ವೀಕೃತಿ ಮತ್ತು ಪರವಾನಿಗೆ ಬಗ್ಗೆ :

ಕಟ್ಟಡ ಪರವಾನಿಗೆಗಳಿಗೆ ಸಂಬಂಧಿಸಿದಂತೆ, ಕಡತಗಳನ್ನು ಹಾಜರುಪಡಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.01 ದಿ:14.01.2019 ರಂದು ನೀಡಲಾಗಿತ್ತು. ಆದರೆ ಪ್ರಾಧಿಕಾರದಿಂದ ಒದಗಿಸಿದ ದಾಖಲೆಗಳ ಪ್ರಕಾರ, ಕರ್ನಾಟಕ ಸರ್ಕಾರ ಸುತ್ತೋಲೆ ಸಂ.ನಅಇ 101 ಮೈಅಪ್ರಾ 2016 ದಿ:21.10.2016 ರಲ್ಲಿ ತಿಳಿಸಿದಂತೆ ನಗರಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ನಿವೇಶನಗಳ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಮಹಾನಗರ ಪಾಲಿಕೆ ಆಯುಕ್ತರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದ್ದು, ಈ ಸುತ್ತೋಲೆಯನ್ನು ಜಾರಿಗೊಳಿಸಿ ಆಯುಕ್ತರು, ಬೆಳಗಾವಿ ನಗಾರಾಭಿವೃದ್ಧಿ ಪ್ರಾಧಿಕಾರ ಇವರ ಕಚೇರಿ ಆದೇಶ ಸಂ. ಬೆನಪ್ರಾ/ಆಡಳಿತ/2016–17 ದಿ:26.11.2016 ರ ಪ್ರಕಾರ ಮೂಲಕ ಪ್ರಾಧಿಕಾರದಿಂದ ನೀಡುತ್ತಿರುವ ಕಟ್ಟಡ ಪರವಾನಗಿ ಮತ್ತು ಕಟ್ಟಡ ಮುಕ್ತಾಯ ಪತ್ರಗಳನ್ನು ನೀಡುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಮಾಹಿತಿ ನೀಡಲಾಗಿದೆ. ಈ ಆಧಾರದ ಮೇಲೆ ಸನ್ 2017–18 ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಯಾವುದೇ ಕಟ್ಟಡ ಪರವಾನಿಗಿಗಳನ್ನು ನೀಡಲಾಗಿರುವುದಿಲ್ಲ. ಎನ್ನುವ ಅಂಶವನ್ನು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಿದೆ.

21) ಸುಧಾರಣಾ ಶುಲ್ಕವನ್ನು ಯೋಜನಾ ಮಂಡಳಿಗೆ ಭರಣಾ ಕುರಿತು :–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ನಿಯಮ 18 ರನ್ವಯ ಪ್ರಾಧಿಕಾರವು ಸಂಗ್ರಹಿಸಿದ ಮೊತ್ತದ ಶೇಕಡಾ 5 ರ ಭಾಗದ ಮೊತ್ತವನ್ನು ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ ನಿಧಿಗೆ ಭರಣಾ ಮಾಡಬೇಕಿದ್ದು, ಭರಣ ಮಾಡಿದ ಮೊತ್ತ ಮತ್ತು ಬಾಕಿ ಉಳಿದ ಮೊತ್ತದ ವಿವರ ಇಂತಿದೆ.

1)	01–04–2017 ರಿಂದ 31–03–18 ರ ವರೆಗೆ ವಸೂಲಾದ ಮೊತ್ತ ರೂ.	2552831.00
2)	ಭರಣಾ ಮಾಡಬೇಕಾದ ಶೇ. 5 ರ ಮೊತ್ತ ರೂ.	127642.00
3)	ಹಿಂದಿನ ಸಾಲಿನ ಬಾಕಿ ಮೊತ್ತ ರೂ.	4560.00
4)	ಒಟ್ಟು	‘132202.00
5)	2017–18 ರಲ್ಲಿ ಭರಣಾ ಮಾಡಿದ್ದು ರೂ.	113870.00
6)	31–03–2018 ಕ್ಕೆ ಬಾಕಿ ರೂ.	18333.00

ಸದರಿ ಮೊತ್ತವನ್ನು 04/2018 ತಿಂಗಳಿನಲ್ಲಿ ಭರಣ ಮಾಡಿರುತ್ತಾರೆ.

ಭರಣಾ ವಿವರ: 1) ಡಿ.ಡಿ. ಸಂಖ್ಯೆ 483624 ದಿ:26.03.2018 ರೂ.113870/–
2) ಡಿ.ಡಿ. ಸಂಖ್ಯೆ 483696 ದಿ:16.04.2018 ರೂ.18333/–

22) 1986–87 ರಿಂದ ಹಂಚಿಕೆ ಆಗದೇ ಇರುವ ಬಿಡಿ ಮತ್ತು ಮೂಲೆ ನಿವೇಶನಗಳ ಕುರಿತು :–

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ದಿ: 16–05–1988 ರಂದು ಸ್ಥಾಪಿತವಾಗಿರುತ್ತದೆ. ವ್ಯಾಪಕಾಭಿವೃದ್ಧಿ ಯೋಜನೆಯಡಿ 7840 ಹೆಕ್ಟರ್ ವಸತಿ ವಿನ್ಯಾಸಗಳನ್ನು ರೂಪಿಸಲಾಗಿರುತ್ತದೆ. ಇಲ್ಲಿಯವರೆಗೆ ಒಟ್ಟು 19 ಎಕರೆ ಜಮೀನನ್ನು

ಸ್ವಾಧೀನಪಡಿಸಿಕೊಂಡಿದ್ದು **10855** ನಿವೇಶನಗಳನ್ನು ರೂಪಿಸಲಾಗಿರುತ್ತದೆ. ಅವುಗಳಲ್ಲಿ ಇಲ್ಲಿಯವರೆಗೆ ಬಿಡಿ ಮತ್ತು ಮೂಲೆ ನಿವೇಶನಗಳು ಸೇರಿ ಒಟ್ಟು **1081** ನಿವೇಶನಗಳು ಹಂಚಿಕೆ ಆಗದೇ ಬಾಕಿ ಉಳಿಸಿಕೊಂಡಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಲ್ಲಿಸಿದ ಮಾಹಿತಿಯಂತೆ ನಿವೇಶನಗಳ ಬಾಕಿ ವಿವರ ಈ ಕೆಳಗಿನಂತಿದೆ. ಯೋಜನೆವಾರು ನಿವೇಶನಗಳ ಬಾಕಿ ವಿವರಗಳನ್ನು 'ಅನುಬಂಧ– 5' ರಲ್ಲಿ ವರದಿಗೆ ಲಗತ್ತಿಸಿದೆ.

ಕ್ರ. ಸಂ.	ಯೋಜನೆ ಹೆಸರು	2016–17 ನೇ ಸಾಲಿನ ಅಂತ್ಯಕ್ಕೆ ಹಂಚಿಕೆ ಆಗದೇ ಇದ್ದ ನಿವೇಶನಗಳು	ಕ್ಷೇತ್ರ	2017–18 ನೇ ಸಾಲಿನಲ್ಲಿ ರೂಪಿಸಿದ ಹೊಸ ನಿವೇಶನಗಳು	2017–18 ರಲ್ಲಿ ವಿತರಣೆ ಮಾಡಿದ ನಿವೇಶನಗಳು	2017–18 ರ ಅಂತ್ಯಕ್ಕೆ ಹಂಚಿಕೆ ಆಗದೇ ಇರುವ ನಿವೇಶನಗಳು	ಅನುಷ್ಠಾನ ವರ್ಷ
1	2	3	4	5	6	7	8
1	ಮಾಧವಪೂರ ವಡಗಾಂವ	–	0–22.0	–	–	–	–
2	6–ಎ ರಾಣಿ ಚನಮ್ಮ ನಗರ	–	27–34.15	–	–	–	–
3	8, 3 ನೇ ರೇಲ್ವೇಗೇಟ್ ಟಿಳಕವಾಡಿ	–	2–2.0	–	–	–	–
4	11ಬಿ ಕುಡಚಿ	74	50–4.0	–	–	74	1986–87
5	12 ಭಾಗ್ಯ ನಗರ	01	7–8.12	–	–	01	1988–89
6	14 ಶಹಾಪೂರ	–	1–15.0	–	–	–	–
7	33 ಶಾಂತಿ ನಗರ	–	14–20.0	–	–	–	1992–93
8	6, 2ನೇ ಹಂತ ರಾಣಿ ಚನ್ನಮ್ಮ ನಗರ	–	58–4.0	–	–	–	1988–89
9	13 ಟಿಪ್ಪು ಸೆಂಟರ್	–	59.38.0	–	–	–	1991–92
10	40ಎ ರೇಸ್‌ಕೋರ್ಸ	–	8–16.0	–	–	–	–
11	17 ಅನಗೋಳ	16	2–39.0	–	–	16	1990–91
12	51 ಲಕ್ಷ್ಮೀಟೆಕಡಿ	19	35–38.8	–	–	19	2000–01
13	47 ಸಹ್ಯಾದ್ರಿ ನಗರ ಬಾಕ್ಸೈಟ ರೋಡ	283	91–24.0	–	–	283	1992–93
14	40 ಕುವೆಂಪು ನಗರ ಗಣಪತಿ ಗುಡಿ	117	116–31.0	–	–	117	1991–94
15	27 ಮಹಾದ್ವಾರ ರಸ್ತೆ	–	2–20.0	–	–	–	–
16	35, 43, 43ಎ ರಾಮತೀರ್ಥ ನಗರ	421	333–11.0	–	–	421	1997–98
17	57 ಗಣೇಶಪೂರ	–	1–20.0	–	–	–	–
18	41 ಪ್ಲಾ. ಯೋ ಕಾಲನಿ ಬೆನಕನಹಳ್ಳಿ	07	3–30.0	–	–	07	1989–90
19	56 ಶ್ರೀ. ಎಚ್.ಡಿ. ಕುಮಾರಸ್ವಾಮಿ ಬಡಾವಣೆ	143	60–15.0	–	–	143	2005–06
	ಒಟ್ಟು	**1081**	**878.20.3**	–	–	**1081**	–

ಸಾರ್ವಜನಿಕರಿಗೆ ವಸತಿ ಕಲ್ಪಿಸುವ ಸಂಬಂಧವಾಗಿ ಜಮೀನನ್ನು ಖರೀದಿಸಿ ಆಗಿಂದಾಗ್ಗೆ ನಿವೇಶನಗಳನ್ನು ಹಂಚಿಕೆ ಮಾಡದೇ ಸನ್ 1986–87 ರಿಂದ 2017–18 ನೇ ಸಾಲಿನ ವರೆಗೂ 1081 ನಿವೇಶನಗಳನ್ನು ಹಂಚಿಕೆ ಮಾಡದೇ ಇರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಈ ಬಗ್ಗೆ ಕೆಳಕಂಡ ಆಕ್ಷೇಪಿತ ಅಂಶಗಳಿಗೆ ಕಂಡಿಕೆವಾರು ಪೂರಕ ದಾಖಲೆಗಳೊಂದಿಗೆ ಅನುಸರಣೆ ನೀಡುವಂತೆ ಸೂಚಿಸಿದೆ.

1) ಬಾಕಿ ಉಳಿದ ಎಲ್ಲ ನಿವೇಶನಗಳ ವಿಲೆ ಕುರಿತು ಹರಾಜು ಕರೆಯುವ ಬದಲಾಗಿ, ಕೆಲವೊಂದು ನಿವೇಶನಗಳಿಗೆ ಮಾತ್ರ ಹರಾಜು ಕರೆಯಲಾಗಿದೆ. ಬಾಕಿ ಉಳಿದ ನಿವೇಶನಗಳ ಹರಾಜು ಕೈಗೊಳ್ಳದೇ ಇರುವುದಕ್ಕೆ ವಿವರಣೆ ನೀಡುವುದು.

2) ಕಳೆದ 30 ವರ್ಷಗಳಿಂದ ಇಷ್ಟೊಂದು ನಿವೇಶನಗಳನ್ನು ಹರಾಜು ಮೂಲಕ ವಿಲೇಮಾಡದೇ ಬಾಕಿ ಉಳಿಸಿಕೊಂಡಿರುವ ಹಾಗೂ ಹರಾಜು ಮಾಡುವ ಕುರಿತು ವಿಳಂಬ ನೀತಿ ಅನುಸರಿಸುತ್ತಿರುವ ಕ್ರಮಗಳ ಬಗ್ಗೆ ಸರ್ಕಾರದಿಂದ ಪ್ರಾಧಿಕಾರವು ಮಂಜೂರಾತಿ ಪಡೆದಿದೆಯೇ? ಈ ಕುರಿತು ಸರ್ಕಾರದ ಪೂರ್ವಾನುಮತಿಯ ಆದೇಶಗಳು, ಸುತ್ತೋಲೆಗಳು, ಪ್ರಾಧಿಕಾರದ ಠರಾವು ನಡುವಳಿಗಳು ಇದ್ದಲ್ಲಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

3) ಹರಾಜು ಮಾಡುವಲ್ಲಿನ ಈ ವಿಳಂಬ ನೀತಿಯು ಪ್ರಾಧಿಕಾರಕ್ಕೆ ಆರ್ಥಿಕ ಹಾನಿಯನ್ನು ಸಹಾ ಉಂಟು ಮಾಡಿರುವುದು ಸ್ಪಷ್ಟ. ಕಾಲಕಾಲಕ್ಕೆ ಹರಾಜು ಪ್ರಕ್ರಿಯೆ ಜರುಗಿಸಿದ್ದಲ್ಲಿ, ಪ್ರಾಧಿಕಾರಕ್ಕೆ ನಿಯಮಿತ ಆದಾಯ ಬರುವುದರೊಂದಿಗೆ, ಆರ್ಥಿಕ ಪರಿಸ್ಥಿತಿಯ ಸಹಾ ಸದೃಢವಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಈ ಮೇಲಿನಂತೆ ಯೋಜನೆಗಳಡಿಯ ನಿವೇಶನ ಹಂಚಿಕೆಯ ಪಾರದರ್ಶಕತೆ ಅನುಷ್ಠಾನ ಕುರಿತಂತೆ ಮೇಲಿನ ಆಕ್ಷೇಪಿತ ಅಂಶಗಳ ಅವಲೋಕನವು ಅವಶ್ಯಕತೆ ಇದ್ದ ಪ್ರಯುಕ್ತ, ಈ ಕುರಿತು ಸಮರ್ಪಕ ವಿವರಣೆಯೊಂದಿಗೆ ಪೂರಕ ದಾಖಲೆಗಳನ್ನು ಹಾಜರುಪಡಿಸುವಂತೆ 2017–18ನೇ ಲೆಕ್ಕಪರಿಶೋದನೆಯಲ್ಲಿ ಸೂಚಿಸಿದ್ದರೂ ಸದರಿ ವಿವರ ಹಾಜರುಪಡಿಸರುವದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.

23)ನಿವೇಶನ ಒಂದುಗೂಡಿಸುವಿಕೆ ಹಾಗೂ ಉಪವಿಭಜನೆ ಪ್ರಕರಣಗಳಲ್ಲಿ ಕಡಿಮೆ ಶುಲ್ಕ ವಸೂಲಿಸಿದ ಬಗ್ಗೆ.

2017–18ನೇ ಸಾಲಿನಲ್ಲಿ ನಿವೇಶನ ಒಂದುಗೂಡಿಸುವಿಕೆ ಹಾಗೂ ಉಪವಿಭಜನೆ ಕುರಿತು 38 ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಹಾಗೂ ಸದರಿ ಕಡತಗಳನ್ನು ಪರಿಶೀಲಿಸಿದಾಗ ನಿವೇಶನ ಒಂದುಗೂಡಿಸುವಿಕೆ ಹಾಗೂ ಉಪವಿಭಜನೆ ಮಂಜೂರಾತಿ ಪ್ರಕರಣಗಳಲ್ಲಿ ಕಡತ ಸಂಖ್ಯೆ 10. ಶ್ರೀ ಕೈಸರ್ ರಜಾಕ್ ಭಾವನಗರಿ ಇವರ ಆಸ್ತಿ ಸಂಖ್ಯೆ 4877/6+7 ಕ್ಕೆ ಸಂಬಂಧಿಸಿದಂತೆ ಆಸ್ತಿಯ ಕ್ಷೇತ್ರ 888.88 ಚ.ಮೀ ಇದ್ದು 743.48 ಚ.ಮೀ ಎಂದು ಪರಿಗಣಿಸಿ ತೆರಿಗೆ ಆಕರಣೆ ಮಾಡಲಾಗಿದೆ. ಆದ್ದರಿಂದ ವ್ಯತ್ಯಾಸದ ಕ್ಷೇತ್ರ 145.4 ಚ.ಮೀ. ದ ಉತ್ತಮತೆ ಶುಲ್ಕ ರೂ.1744.80 ಹಾಗೂ ಸ್ಲಮ್ ಸೆಸ್ ರೂ.181.75 ಒಟ್ಟು ರೂ.1926.55 ಕಡಿಮೆ ವಸೂಲಿ ಮಾಡಲಾಗಿದ್ದು ಈ ಕುರಿತು ವಿವರಣೆ ನೀಡಲು ಕೋರಿ ನೀಡಲಾದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 13 ದಿನಾಂಕ 19.01.2019 ಕ್ಕೆ ಪ್ರಾಧಿಕಾರದಿಂದ ನೀಡಿದ ಅನುಸರಣೆಯಲ್ಲಿ ಸಿ.ಟಿ.ಎಸ್. ಉತಾರದಲ್ಲಿ ವ್ಯವಹಾರ ಕಾಲಂನಲ್ಲಿ 4000ಚ.ಅ. ಎಂದು ನಮೂದಿಸಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಸಿ.ಟಿ.ಎಸ್. ಉತಾರದಲ್ಲಿ ಸಿಟಿ ಸರ್ವೆ ಇಲಾಖೆಯವರು ಜಾಗದ ಅಳತೆ ನಮೂದಿಸಬೇಕಾಗುವದರಿಂದ ನೀಡಿದ ಅನುಸರಣೆ ಆಕ್ಷೇಪಣೆಗೆ ಅನುಗುಣವಾಗಿಲ್ಲ. ಆದ್ದರಿಂದ ರೂ. 1926.55 ಗಳನ್ನು ವಸೂಲಾತಿಗೆ ಸೂಚಿಸಿದೆ.

ನಿವೇಶನ ಒಂದುಗೂಡಿಸುವಿಕೆ ಹಾಗೂ ಉಪವಿಭಜನೆ ಮಂಜೂರಾತಿ ಕುರಿತ ಕಡತಗಳ ವಿವರಗಳನ್ನು ಅನುಬಂಧ – 06 ರಲ್ಲಿ ಲಗತ್ತಿಸಿದೆ.

24) ಅನುಮೋದನೆಗೊಳ್ಳದ ಅಂದಾಜು ಪತ್ರಿಕೆಗಳನ್ನು ಪರಿಗಣಿಸಿ ತೆರಿಗೆ ವಸೂಲಿ ಮಾಡಿದ ಬಗ್ಗೆ.

ರಿ.ಸ.ನಂ.1258/1 ರಿಂದ 8 ಹಾಗೂ 10,11 ಅಧ್ಯಕ್ಷರು, ಸರ್ಕಾರಿ ಹಾಗೂ ಅರೆ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘ ನಿಯಮಿತ, ಬೆಳಗಾವಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಅಂದಾಜು ಪತ್ರಿಕೆಗಳಿದ್ದು

ಪ್ರಾಧಿಕಾರದಿಂದ ಮಂಜೂರಾತಿ ನೀಡಿರುವದಿಲ್ಲ. ಆದಾಗ್ಯೂ **recapitulation sheet** (ಪರಿವಿಡಿ) ಯಲ್ಲಿ **water supply with B/W** ಅಂದಾಜು ಪತ್ರಿಕೆಯ ಮೊತ್ತ ರೂ. 52 ಲಕ್ಷಗಳನ್ನು ತಿದ್ದಿ 10 ಲಕ್ಷಕ್ಕೆ ಏರಿಸಿ ಅಂದರೆ 62 ಲಕ್ಷ ಮಾಡಿ ಒಟ್ಟು ಮೊತ್ತ ರೂ.4.73 ಕೋಟಿಯನ್ನು ರೂ.4.83 ಕೋಟಿಗೆ ತಿದ್ದುಪಡಿ ಮಾಡಿ ತೆರಿಗೆ ವಸೂಲಿ ಮಾಡಲಾಗಿದೆ. ಆದರೆ ಸದರಿ ಎಲ್ಲ ತಿದ್ದುಪಡಿಗಳಿಗೆ ಸಹಿಗಳಿಲ್ಲ. ಆದ್ದರಿಂದ ಅನುಮೋದನೆಗೊಳ್ಳದ ಅಂದಾಜು ಪತ್ರಿಕೆಗಳನ್ನು ತೆರಿಗೆ ವಸೂಲಿಗೆ ಪರಿಗಣಿಸಿದ್ದು ಸರಿಯಾದ ಕ್ರಮವಲ್ಲ.

ಅ.ಸಂ.	ವಿವರಣೆ	ಮೊತ್ತ (ರೂ.)
1	Construction of roads	15405785.00
2	Construction of drains	13983497.70
3	Garden development	2470624.94
4	Water supply with B/W	5200000.00
5	U.G.D. Line	3000000.00
6	Electrical works	7178610.80
	Total	47238518.44
7	Miscellaneous	61481.56
	GRAND TOTAL	47300000.00

ಈ ಮೇಲಿನ ಅನುಮೋದಿತ ದಾಖಲೆಗಳನ್ನು ಕರ್ನಾಟಕ ನಗರಾಭಿವೃದ್ಧಿ ಕಾಯ್ದೆ 1987 ನಿಯಮ 50 ರ ಪ್ರಕಾರ ಕಾಲೋಚಿತಗೊಳಿಸಿ ಹಾಜರುಪಡಿಸಲು ತಿಳಿಸಿ ನೀಡಲಾದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:14 ದಿನಾಂಕ:19.01.2019ಕ್ಕೆ ಪ್ರಾಧಿಕಾರ ನೀಡಿದ ಅನುಸರಣೆ ಆಕ್ಷೇಪಣೆಗೆ ಅನುಗುಣವಾಗಿಲ್ಲ, ಮುಂದುವರೆಸಲಾಗಿದೆ.

25) ಏಕ ನಿವೇಶನ ಮಂಜೂರಾತಿ ಪ್ರಕರಣಗಳಲ್ಲಿ ಕಂಡುಬಂದ ನ್ಯೂನತೆಗಳು.

2017-18ನೇ ಸಾಲಿನಲ್ಲಿ ಏಕವಸತಿ ವಿನ್ಯಾಸದ ಅನುಮೋದನೆಯ ಕುರಿತು 29 ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಹಾಗೂ ಸದರಿ ಕಡತಗಳನ್ನು ಪರಿಶೀಲಿಸಿದಾಗ

1. ಕಡತ ಸಂಖ್ಯೆ 12 ಶ್ರೀ ರಾಜೇಶ ಹೇಡಾ ಹಾಗೂ ಇತರರು ಇವರ ಆಸ್ತಿ ಸಂಖ್ಯೆ 798/3 ರಲ್ಲಿ ಹಾಗೂ ಕಡತ ಸಂಖ್ಯೆ 17 ಶ್ರೀ ಸಂಗಪ್ಪ. ಕೆಂ.ಸೈದಾಪೂರ ಇವರ ಆಸ್ತಿ ಸಂಖ್ಯೆ 799/5 ರಲ್ಲಿ ವಾಣಿಜ್ಯ ಹಾಗೂ ವಸತಿ ಉದ್ದೇಶಕ್ಕಾಗಿ ಭಾಗಶಃ ಜಾಗ ಉಪಯೋಗಿಸಿದ್ದು ರಸ್ತೆಗಾಗಿ ಕೆಲವು ಭಾಗ ಬಿಡಲಾಗಿದೆ. ಈ ರಸ್ತೆಗಾಗಿ ಬಿಟ್ಟ ಜಾಗೆಯನ್ನು ಒಂದರಲ್ಲಿ ವಾಣಿಜ್ಯ ದರದಂತೆ ಹಾಗೂ ಇನ್ನೊಂದರಲ್ಲಿ ವಸತಿ ದರದಂತೆ ಸುಧಾರಣಾ ಶುಲ್ಕ ವಸೂಲಿ ಮಾಡಲು ಪರಿಗಣಿಸಲಾಗಿದೆ.

ಅ.ಸಂ.	ಹೆಸರು	ಆಸ್ತಿ ಸಂಖ್ಯೆ	ಒಟ್ಟು ಕ್ಷೇತ್ರ	ವಸತಿ	ವಾಣಿಜ್ಯ	ರಸ್ತೆ
1	ರಾಜೇಶ ಹೇಡಾ	798/3	5058.5 ಚ.ಮೀ	3474.22	1214.04	370.24
2	ಸಂಗಪ್ಪ ಸೈದಾಪೂರ	799/5	2023.4 ಚ.ಮೀ	1199.96	708.19	115.25

ಕೆ.ಟಿ.ಸಿ.ಪಿ ಕಾಯ್ದೆ ಪ್ರಕಾರ ವಸೂಲಾತಿ ಮಾಡಲಾಗಿದೆ ಎಂಬ ಕುರಿತು ಧೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು, ಹಾಗೂ ಈ ರೀತಿ ಬೇರೆ ಬೇರೆಯಾಗಿ ಪರಿಗಣಿಸಲು ಕಾರಣವೇನು ಎಂದು ಸ್ಪಷ್ಟೀಕರಣ ನೀಡಲು ನೀಡಿದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 15 (ಕ್ರ.ಸಂ.1)ದಿನಾಂಕ 19.01.2019 ಕ್ಕೆ ಪ್ರಾಧಿಕಾರದಿಂದ ನೀಡಿದ ಅನುಸರಣೆಯಲ್ಲಿ ರಿ.ಸ.ನಂ. 799/5 ರಲ್ಲಿ ವಸತಿ ವಲಯದಲ್ಲಿ ಪರಿಗಣಿಸಿ ಹೆಚ್ಚಿಗೆ ಶುಲ್ಕ ಭರಿಸಿಕೊಳ್ಳಲಾಗಿದೆ ಎಂದಿದ್ದು, ಹೇಗೆ ಎಂದು ವಿವರಣೆ ನೀಡಿಲ್ಲವಾದ್ದರಿಂದ ಅನುಸರಣೆ ಒಪ್ಪಲಾಗದು.

2. ಕಡತ ಸಂಖ್ಯೆ 14 ಶ್ರೀಮತಿ ರಾಧಾ ಆರ್ ದೇಶಪಾಂಡೆ ಆಸ್ತಿ ಸಂಖ್ಯೆ 184/1ಡಿ+2ಡಿ ಕ್ಷೇತ್ರ 1771.65 ಕ್ಕೆ ಸಂಬಂಧಿಸಿದಂತೆ ಬಯಲು ಜಾಗೆ ಶುಲ್ಕ ರೂ.12,81,798/– ವಸೂಲಿ ಮಾಡಲಾಗಿದ್ದು ಯಾವ ಆಧಾರದ ಮೇಲೆ ವಸೂಲಿ ಮಾಡಲಾಗಿದೆ ಎಂಬ ಕುರಿತು ಕಡತದಲ್ಲಿ ಮಾಹಿತಿ ಹಾಜರಪಡಿಸಿಲ್ಲ. ಸದರಿ ಮಾಹಿತಿ ಒದಗಿಸಲು ನೀಡಿದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 15 (ಕ್ರ.ಸಂ.2)ದಿನಾಂಕ 19.01.2019 ಕ್ಕೆ ಯಾವುದೇ ಅನುಸರಣೆ ನೀಡಿಲ್ಲವಾದ್ದರಿಂದ ದಾಖಲೆಗಳನ್ನು ಹಾಜರುಪಡಿಸುವವರೆಗೆ ರೂ.12,81,798 ಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ–7 ರಲ್ಲಿ ಲಗತ್ತಿಸಲಾಗಿದೆ.

26) ಖಾಸಗಿ ಬಡಾವಣೆಗಳ ವಿನ್ಯಾಸಗಳ ಅನುಮೋದನೆ ಕುರಿತು :–

2017–18 ನೇ ಸಾಲಿನಲ್ಲಿ ಒಟ್ಟು ಖಾಸಗಿ ಬಡಾವಣೆಗಳ ವಿನ್ಯಾಸದ ಕುರಿತು 13 ಪ್ರಕರಣಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದೆ. ಹಾಗೂ ಸದರಿ ಕಡತಗಳನ್ನು ಪರಿಶೀಲಿಸಿದಾಗ

1. ಸರ್ಕಾರದ ಸುತ್ತೋಲೆ ಸಂ.ನಇ:74ಬೆರೂಪ್ರಾ:2006 ದಿ.12.11.2017 ರ ಕಂಡಿಕೆ 3ರಲ್ಲಿ ತಿಳಿಸಿದಂತೆ ಅರ್ಜಿದಾರರಿಗೆ ಶುಲ್ಕ ಪಾವತಿಸಲು ತಿಳಿಸು ಸಿವಿಲ್ ಕಾಮಗಾರಿ, ಒಳಚರಂಡಿ, ನೀರು ಸರಬರಾಜು ವ್ಯವಸ್ಥೆ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನ ಅಭಿವೃದ್ಧಿಗಾಗಿ ಅಂದಾಜು ಪಟ್ಟಿಯನ್ನು ರೂಪಿಸಲು ಕ್ರಮ ಜರುಗಿಸಬೇಕಾಗುತ್ತದೆ. ಈ ಅಂದಾಜು ಪತ್ರಿಕೆಗಳನ್ವಯ ಅಬಿವೃದ್ಧಿ ಕಾರ್ಯಗಳನ್ನು ಅರ್ಜಿದಾರರೇ ಮಾಡಿಕೊಡಲು ಒಪ್ಪಿದಲ್ಲಿ ಆಯಾ ಇಲಾಖೆಗಳ ಮೇಲ್ವಿಚಾರಣೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಕಾರ್ಯಗಳನ್ನು ಪೂರ್ಣಗೊಳಿಸಿ ಪ್ರಮಾಣ ಪತ್ರಗಳನ್ನು ಆಯಾ ಇಲಾಖೆಯಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಅದರಂತೆ ಪ್ರಸ್ತುತ ಸಾಲಿನಲ್ಲಿ ಕಡತಗಳನ್ನು ಪರಿಶೀಲಿಸಲಾಗಿ ಕೆಲವು ಕಡತಗಳಲ್ಲಿ ಸಿವಿಲ್ ಕಾಮಗಾರಿಗಳ ಅಂದಾಜು ಪತ್ರಿಕೆ ಮಾತ್ರ ಇವೆ. ಕೆಲವು ಕಡತಗಳಲ್ಲಿ ವಿದ್ಯುತ್ ಸಂಪರ್ಕ ಹಾಗೂ ಒಳಚರಂಡಿ ಸಂಪರ್ಕ ಕುರಿತಾದ ಅಂದಾಜು ಪತ್ರಿಕೆಗಳಿಲ್ಲದೇ ಅನುಮೋದನೆ ನೀಡಲಾಗಿದೆ.
2. ಖಾಸಗಿ ಬಡಾವಣೆಗಳ ವಿನ್ಯಾಸವು ಅಭಿವೃದ್ಧಿ ಹಂತದಲ್ಲಿರುವಾಗ ನಗರಾಭಿವೃದ್ಧಿ ಪ್ರಾದಿಕಾರದ ತಾಂತ್ರಿಕ ಸಿಬ್ಬಂದಿಗಳು ಕೆಲಸದ ಗುಣಮಟ್ಟ ಪರಿಶೀಲಿಸಲು ಭೇಟಿ ನೀಡಿದ ಕುರಿತು ಸದರಿ ಭೇಟಿಯಲ್ಲಿ ಕೆಲಸದ ಪ್ರಗತಿ ಹಾಗೂ ಗುಣಮಟ್ಟ ದಾಖಲಿಸಿದ ಕುರಿತು ದಾಖಲೆಗಳಿಲ್ಲ.
3. ಖಾಸಗಿ ಬಡಾವಣೆಗಳ ವಿನ್ಯಾಸ ಕುರಿತು ವಿವರಗಳನ್ನು ಅನುಬಂಧ–8 ರಲ್ಲಿ ವರದಿಗೆ ಲಗತ್ತಿಸಿದೆ.

27) ಭೂ ಸ್ವಾಧೀನ ವಿಭಾಗದ ಲೆಕ್ಕ :–

1) ಪ್ರಾಧಿಕಾರದಡಿಯಲ್ಲಿ ಭೂಮಿ ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಪ್ರತ್ಯೇಕ ಭೂಸ್ವಾಧೀನ ವಿಭಾಗವಿದ್ದು. ಈ ವಿಭಾಗಕ್ಕೆ ಪ್ರಾಧಿಕಾರದ ನಿಧಿಯಿಂದ ಹಣ ನೀಡಲಾಗುತ್ತದೆ. ಸದರಿ ವ್ಯವಹಾರದ ಕುರಿತು, ರಜಿಸ್ಟರ್ ನಿರ್ವಹಿಸಿ ನಮೂದಿಸಲಾಗುತ್ತಿದೆ. ನಿಗದಿತ ನಮೂನೆಯ ನಗದು ಪುಸ್ತಕದಲ್ಲಿ ನಿರ್ವಹಿಸಲು ಸೂಚಿಸಿದೆ.

ಭೂ ಸ್ದಿನಾಂಕ: 01–04–2017 ರ ಆರಂಭ ಶಿಲ್ಕು	18,00,504.00
2017–18 ನೇ ಸಾಲಿನಲ್ಲಿ ಜಮಾ	6,81,87,505.00
ಒಟ್ಟು	6,99,88,009.00
2016–17 ನೇ ಸಾಲಿನಲ್ಲಿ ಖರ್ಚು	6,77,38,394.17
ದಿನಾಂಕ: 31–03–2018 ರ ಅಂತಿಮ ಶಿಲ್ಕು	22,49,614.83
ಸಂಚಿತ ಠೇವಣಿ	4344771.00
31.03.2018ರ ಅಂತಿಮ ಶಿಲ್ಕು	6594385.83

ಸದರಿ ವೆಚ್ಚವನ್ನು ಸಾಮಾನ್ಯ ನಿಧಿಯಿಂದ ಭರಿಸಿರುತ್ತಾರೆ.

27)ಅ) ಭೂ ಸ್ವಾಧೀನ ವಿಭಾಗದ ಬ್ಯಾಂಕ್ ಖಾತೆಗಳ ಅಂತಿಮ ಶಿಲ್ಕಿನ ವಿವರ :–

ಸದರಿ ಆರ್ಥಿಕ ವ್ಯವಹಾರಗಳನ್ನು ಕಾರ್ಪೋರೇಶನ್ ಬ್ಯಾಂಕ್ ಹಾಗೂ ಯುನಿಯನ್ ಬ್ಯಾಂಕ್‌ಗಳಲ್ಲಿ "ಕರಂಟ್ ಅಂಕೌಟ" ನಲ್ಲಿ ಖಾತೆಗಳನ್ನು ತೆರೆಯಲಾಗಿದ್ದರಿಂದ ಅವುಗಳ ಮೇಲೆ ಯಾವುದೇ ಬಡ್ಡಿ ಸ್ವೀಕೃತಿಯಾಗಿಲ್ಲ. ಎಸ್.ಬಿ. ಅಕೌಂಟದಲ್ಲಿ ಇಟ್ಟಿದ್ದರೆ, ಅವುಗಳ ಮೇಲೆ ಬಡ್ಡಿ ಸ್ವೀಕೃತಿಯಾಗಿ ಪ್ರಾಧಿಕಾರಕ್ಕೆ ಬಡ್ಡಿ ರೂಪದಲ್ಲಿ ಆದಾಯ ಬರಬಹುದಾಗಿತ್ತು. ಅಲ್ಲದೇ ಒಂದು ವಿಭಾಗದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಬ್ಯಾಂಕ್ ಖಾತೆಗಳ ಅವಶ್ಯಕತೆ ತಿಳಿದುಬರುವುದಿಲ್ಲ. ಆದ್ದರಿಂದ ಈ ದಿಶೆಯಲ್ಲಿ ಕ್ರಮ ಜರುಗಿಸಲು ಬಡ್ಡಿ ರೂಪದಲ್ಲಿ ಆದಾಯ ಬರುವಂತೆ ಕ್ರಮ ವಹಿಸಲು ಹಾಗೂ ಯುಬಿಆಯ್ ಖಾತೆ ಸಂಖ್ಯೆ 35033 ಮತ್ತು ಕಾರ್ಪೋರೇಷನ್ ಬ್ಯಾಂಕ್ ಖಾತೆ ಸಂಖ್ಯೆ:01513ರ ವಹಿವಾಟನ್ನು ಒಂದೇ ರಜಿಸ್ಟರ್‌ದಲ್ಲಿ ನಮೂದಿಸಿದ್ದು, ಬೇರೆ ಬೇರೆ ವಿವರ ಬರೆಯುವುದು ಇಲ್ಲವಾದಲ್ಲಿ ಕಾರ್ಪೂರೇಷನ್ ಬ್ಯಾಂಕ್ ಖಾತೆಯನ್ನು ಮುಕ್ತಾಯಗೊಳಿಸಿ ಯುಬಿಆಯ್ ಗೆ ವರ್ಗಾಯಿಸಿ ವಹಿವಾಟನ್ನು ನಿರ್ವಹಿಸಲು ಸೂಚಿಸಿದೆ.

ಬ್ಯಾಂಕ ಖಾತೆ ಸಂಖ್ಯೆ	ನಗದು ಪುಸ್ತಕ ಪ್ರಕಾರ ಶಿಲ್ಕು	ಬ್ಯಾಂಕ ಖಾತೆ ಪ್ರಕಾರ ಶಿಲ್ಕು	ವ್ಯತ್ಯಾಸ
ಯು.ಬಿ.ಐ 35033	2080442.00	2080442.00	–
ಕಾರ್ಪೋರೇಶನ್ 01513	169172.00	169172.00	–
1) ಕಾರ್ಪೋರೇಶನ್ ಬ್ಯಾಂಕ್ ಸಂ.ಕೆಸಿಸಿ/01/770332	3966817.00	3966817.00	–
2) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಂ 303/92417	24489.00	24489.00	–
3) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಂ 303/90440	353465.00	353465.00	–
ಒಟ್ಟು	6594385.00	6594385.00	–

28) ಭೂಸ್ವಾಧೀನ ಪ್ರಕರಣಗಳ ಪರಿಹಾರ ಧನವಿತರಣೆ ಕುರಿತು:–

ಸನ್ 2017–18 ನೇ ಸಾಲಿನಲ್ಲಿ ಪ್ರಾಧಿಕಾರವು ಭೂಸ್ವಾಧೀನ ಪ್ರಕರಣಗಳ ಪರಿಹಾರ ಧನ ವಿತರಣೆ ಮಾಡಿದ ಕುರಿತಂತೆ ಪರಿಶೀಲನೆ ಮಾಡಲಾದ ಒಟ್ಟು 64 ಪ್ರಕರಣಗಳಲ್ಲಿ ಒಟ್ಟು ರೂ.6,77,38,394/– ಗಳನ್ನು ಪರಿಹಾರಧನ ಎಂದು ವಿತರಿಸಲಾಗಿದೆ. ಭೂಸ್ವಾಧೀನಕ್ಕೆ ಎಂದು ಪ್ರಾಧಿಕಾರದಿಂದ ಪಡೆಯಲಾದ ಮೊತ್ತದಲ್ಲಿ ನಗದು ಪುಸ್ತಕದ ಪ್ರಕಾರ ಮಾರ್ಚ 2018 ಅಂತ್ಯಕ್ಕೆ ರೂ. 6594385/– ಗಳಷ್ಟು ಶಿಲ್ಕು ಇರುವುದು ಹಾಗೂ ಮುದ್ದತ ಠೇವಣಿ ರೂ. 6594385/– ಗಳಷ್ಟು ಇರುವುದು. ಭೂಸ್ವಾಧೀನ ಪ್ರಕರಣಗಳನ್ನು ಸಕಾಲದಲ್ಲಿಯೇ ಇತ್ಯರ್ಥಗೊಳಿಸದೇ ಈ ಪರಿಹಾರ ಧನ ಶಿಲ್ಕು ಉಳಿದಿರಬಹುದಾಗಿದೆ. ಸಕಾಲದಲ್ಲಿಯೇ ಪ್ರಕರಣಗಳ ಇತ್ಯರ್ಥಕ್ಕೆ ಕ್ರಮಕೈಗೊಂಡು ಪರಿಹಾರ ಧನ ವಿತರಣೆ ಮಾಡಬೇಕು, ಭೂಸ್ವಾಧೀನತೆ ಪಡೆದ ಪರಿಹಾರ ಸಂದಾಯ ತಡವಾದಲ್ಲಿ ಅಥವಾ ನೀಡಿಕೆಯಲ್ಲಿ ಮಿತಿ ಮೀರಿ ವಿಳಂಬ ಮಾಡಿದಲ್ಲಿ ಭೂ ಅರ್ಜನೆ ಅಧಿನಿಯಮದ ಪ್ರಕಾರ ಬಡ್ಡಿ ನೀಡಬೇಕಾದಲ್ಲಿ ಪ್ರಾಧಿಕಾರಕ್ಕೆ ಆರ್ಥಿಕ ಹಾನಿಯನ್ನುಂಟಾಗುವುದು. ಕಾರಣ ಶಿಲ್ಕು ಉಳಿಸಿಕೊಂಡಿರುವ ಮೊತ್ತವನ್ನು ಕೂಡಲೇ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ವಿಲೆಮಾಡಲು ಕ್ರಮವಹಿಸಲು ಸೂಚಿಸಿದೆ.

ಪ್ರಸಕ್ತ ಸಾಲಿನಲ್ಲಿ ಪರಿಹಾರಧನ ವಿತರಣೆಯ ಪ್ರಕರಣಗಳ ವಿವರಗಳನ್ನು ಅನುಬಂಧ ನಂ. 9 & 9ಅ ರಲ್ಲಿ ಕಾಣಿಸಿ ವರದಿಗೆ ಲಗತ್ತಿಸಿದೆ.

29) 2017–18 ರ ಭೂಸ್ವಾಧೀನ ಮೊತ್ತವನ್ನು ನ್ಯಾಯಾಲಯಕ್ಕೆ ಭರಣಾ ಮಾಡಿದ ಕುರಿತು.

2017–18 ನೇ ಸಾಲಿನಲ್ಲಿ ಪ್ರಾಧಿಕಾರ ನೀಡಿದ **Receipt & Payment** ತಖ್ತೆ ಪ್ರಕಾರ ರೂ.66561120/– ಗಳನ್ನು ಭೂ ಸ್ವಾಧೀನ ವೆಚ್ಚ ಎಂದು ತೋರಿಸಿದ್ದು, ವಿಶೇಷ ಭೂಸ್ವಾಧೀನಾಧಿಕಾರಿಗಳು ನೀಡಿದ ಮಾಹಿತಿ ಪ್ರಕಾರ ರೂ.67738394/– ವೆಚ್ಚ ಎಂದು ತೋರಿಸಲಾಗಿದೆ. ಈ ವ್ಯತ್ಯಾಸಕ್ಕೆ ವಿವರಣೆ ಹಾಗೂ ಭೂಸ್ವಾಧೀನ ಮಾಡಿಕೊಂಡ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಭರಣಾ ಮಾಡಿದ ವೆಚ್ಚದ ವಿವರ ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ: 29 ದಿನಾಂಕ: 21.01.2019ಕ್ಕೆ ಪ್ರಾಧಿಕಾರ ನೀಡಿದ ಅನುಸರಣೆಯಲ್ಲಿ ಪಾವತಿ ಕುರಿತು ಚೆಕ್ ಸಂಖ್ಯೆ ಮತ್ತು ದಿನಾಂಕಗಳ ವಿವರಗಳನ್ನು ಹಲವಾರು ಪ್ರಕರಣಗಳಿಗೆ ದಾಖಲಿಸಿಲ್ಲ. ಉದಾಹರಣೆ : ರಿ.ಸ.ನಂ.557/1, ಭೂ ಮಾಲಿಕರು ಶ್ರೀ ನೇಮಣ್ಣಾ ಬಸವಂತ ಖೋಮಣ್ಣವರ ಮತ್ತು ಇತರರು, ಎಕರೆ–03, ಗುಂಟೆ–17 ನ್ಯಾಯಾಲಯದ ಆದೇಶ ಸಂ.ಎಲ್ಎಸಿ–4/1999 ದಿ:12.06.2017 ರೂ.109627/– ಚೆಕ್ ಪಾವತಿ ಸಂ.0392416/24.06.2017 ಈ ಹಿನ್ನೆಲೆಯಲ್ಲಿ ಭರಣಾ ಮಾಡಿದ ಮೊತ್ತ ಸಕಾಲದಲ್ಲಿ ಪಾವತಿಗೊಂಡಿದೆ ಎಂಬ ಬಗ್ಗೆ ತಿಳಿದುಬರುವುದಿಲ್ಲ. ಅಲ್ಲದೇ ವ್ಯತ್ಯಾಸ ಮೊತ್ತ ಕುರಿತು ವಾರ್ಷಿಕ ಲೆಕ್ಕ ಪತ್ರದಲ್ಲಿ **TDS payable on compensation interest Rs. 1176343/–** ಪರಿಗಣಿಸದೇ ಇರುವುದರಿಂದ ಭೂ ಸ್ವಾಧೀನ ವಿಭಾಗದ ಜಮಾ ಖರ್ಚು ಹಾಗೂ ಹಣಕಾಸು ವಿಭಾಗದ ಜಮಾ ಖರ್ಚಿಗೆ ವ್ಯತ್ಯಾಸ ಇರುವುದಾಗಿ ಅನುಸರಣೆಯಲ್ಲಿ ತಿಳಿಸಿದ್ದು, ಕಾರಣ ಮರುಸಮನ್ವಯಗೊಳಿಸಿ ವಾರ್ಷಿಕ ಲೆಕ್ಕಪತ್ರದ **R&P** ತಃಖ್ತೆ ಪರಿಷ್ಕರಿಸಲು ತಿಳಿಸಿದೆ ಹಾಗೂ ಮುಂದಿನ ಅವಧಿಯಲ್ಲಿ ಸದರಿ ಪರಿಷ್ಕರಣೆ ಅಳವಡಿಸಲು ಸಹ ತಿಳಿಸಿದೆ.

30) ಸ್ವಯಂ ಘೋಷಿತ ಆಸ್ತಿ ತೆರಿಗೆ ಬಗ್ಗೆ :–

ಸ್ವಯಂ ಘೋಷಿತ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ಇರುವ ಒಟ್ಟು ಆಸ್ತಿಗಳ ಸಂಖ್ಯೆ ಎಷ್ಟು? ತೆರಿಗೆ ಸಂದಾಯವಾದ ಆಸ್ತಿಗಳ ಸಂಖ್ಯೆ ಎಷ್ಟು? ಬೇಡಿಕೆ ಎಷ್ಟು? ಆಸ್ತಿ ಸಂದಾಯವಾಗದೆ ಬಾಕಿ ಉಳಿದ ಪ್ರಕರಣಗಳು ಎಷ್ಟು? ಯಾವ ಪ್ರಕಾರವಾಗಿ ಆಸ್ತಿ ತೆರಿಗೆಯನ್ನು ವಿಧಿಸಲಾಗುತ್ತದೆ. ಆಸ್ತಿಗಳನ್ನು ಪರಿಶೀಲನೆ ಮಾಡಿ ತೆರಿಗೆಗಳನ್ನು ವಿಧಿಸಲಾಗುತ್ತದಯೇ? ತೆರಿಗೆ ಭರಣಾ ಮಾಡಿದ ನಂತರ ಹೆಚ್ಚಿನ ಪ್ರಮಾಣದಲ್ಲಿ ಕಟ್ಟಡ ನಿರ್ಮಿಸಿಕೊಂಡ **(exceed)** ಆಸ್ತಿಗಳಿಗೆ ಹೆಚ್ಚಿನ ತೆರಿಗೆ ವಿಧಿಸಲಾಗಿದೆಯೇ ಎಂಬ ಬಗ್ಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ನಿಯಮ 37 ರಿಂದ 47 ರ ಪ್ರಕಾರ ಪ್ರಾಧಿಕಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ನೀಡಲು ಲೆಕ್ಕ ಪರಿಶೋಧನಾ ವಿಚಾರ ಪತ್ರ ಸಂಖ್ಯೆ 03 ದಿನಾಂಕ:17/01/2019 ಕ್ಕೆ ಪ್ರಾಧಿಕಾರದಿಂದ ಉತ್ತರ ಸ್ವೀಕೃತವಾಗಿಲ್ಲ.

ಪ್ರಾಧಿಕಾರದಿಂದ ಒಂದು ಸಾಮಾನ್ಯ ರಜಿಸ್ಟರನಲ್ಲಿ ತೆರಿಗೆದಾರರ ಹೆಸರು ಮತ್ತು ಅವರು ಚಲನ ಭರಣಾ ಮಾಡಿದ ವಿವರಗಳನ್ನು ಮಾತ್ರ ನಮೂದಿಸಿ ನಿರ್ವಹಿಸಿದ್ದಾರೆ.

ರಾಜ್ಯದಲ್ಲಿ ದಿನಾಂಕ:01–04–2002 ರಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ದತಿ ಜಾರಿಗೊಂಡಿರುವುದರಿಂದ, ಮಹಾನಗರ ಪಾಲಿಕೆಗೆ ಹಸ್ತಾಂತರಗೊಳ್ಳದೇ ಇರುವ 1237 ಆಸ್ತಿಗಳ ತೆರಿಗೆಯು ರೂ.34,62,261/– ಗಳು ಸ್ವೀಕೃತವಾಗಿದ್ದು, 2017–18 ರ ಅಂತ್ಯಕ್ಕೆ ರೂ.7,30,070/– ಗಳು ವಸೂಲಿಸಲು ಬಾಕಿ ಉಳಿದಿರುತ್ತದೆ. ಸದರಿ ಬಾಕಿ ಉಳಿದ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು ವಸೂಲಿ ಮಾಡಿ ಪ್ರಾಧಿಕಾರದ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ಸೂಚಿಸಿದೆ. ತೆರಿಗೆ ವಸೂಲಿ ಮಾಡಿದ ಒಟ್ಟು ಮೊತ್ತವನ್ನು ನಗದು ಪುಸ್ತಕದ ಶಿಲ್ಕಿನೊಂದಿಗೆ ಹೊಂದಾಣಿಕೆ ಮಾಡಲು ಸೂಚಿಸಿದೆ. ಆಸ್ತಿರಜಿಸ್ಟರನ್ನು ನಿರ್ವಹಿಸದೇ ಇದ್ದ ಪ್ರಯುಕ್ತ ಆಸ್ತಿ ಕರಕ್ಕೆ ಒಳಪಡುವ ಒಟ್ಟು ಆಸ್ತಿಗಳ ಸಂಖ್ಯೆ, ಆಸ್ತಿಕರ ಬೇಡಿಕೆ, ವಸೂಲಿ, ಬಾಕಿ ವಿವರಗಳನ್ನು ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಿಕೊಳ್ಳಲು ಸಾಧ್ಯವಾಗಿಲ್ಲ. ಪ್ರಾಧಿಕಾರದಿಂದ ನೀಡಿದ ಮಾಹಿತಿ ಅನುಸಾರ ಆಸ್ತಿ ಕರದ ವಿವರ ಈ ಕೆಳಗಿನಂತಿದೆ.

ಅ. ನಂ.	ಬಡಾವಣೆ ಹೆಸರು		2016-17 ರ ಬಾಕಿ	ಪ್ರಸಕ್ತ ಸಾಲಿನ ಒಟ್ಟು ಆಸ್ತಿಗಳ ಸಂಖ್ಯೆ	ಒಟ್ಟು	2017-18 ರಲ್ಲಿ ತೆರಿಗೆ ಸಂದಾಯವಾದ ಆಸ್ತಿಗಳ ಸಂಖ್ಯೆ	2017-18 ನೇ ಸಾಲಿನ ಅಂತ್ಯಕ್ಕೆ ಆಸ್ತಿ ತೆರಿಗೆ ಸಂದಾಯವಾಗದ ಆಸ್ತಿಗಳ ಸಂಖ್ಯೆ
1	2		3	4	5	6	7
1	ಯೋಜನೆ-35 ರಾಮತೀರ್ಥ ನಗರ	ಮನೆಗಳ ಸಂಖ್ಯೆ	317	1126	1443	1126	317
		ಮೊತ್ತ	461882	3219896	3681778	3219896	461882
2	ಯೋಜನೆ-56 ಹೆಚ್.ಡಿ. ಕುಮಾರಸ್ವಾಮಿ ಬಡಾವಣೆ	ಮನೆಗಳ ಸಂಖ್ಯೆ	139	111	250	111	139
		ಮೊತ್ತ	268188	242365	510553	242365	268188
	ಅಂತೂ ಒಟ್ಟು	ಮನೆಗಳ ಸಂಖ್ಯೆ	456	1237	1693	1237	456
		ಮೊತ್ತ	730070	3462261	4192331	3462261	730070

31) ಹೊರಗುತ್ತಿಗೆಯ ಮುಖಾಂತರ ಸ್ವಚ್ಚತಾ ಕಾರ್ಯಕ್ಕಾಗಿ ಕಾರ್ಮಿಕರ ಸೇವೆಯನ್ನು ಪಡೆದಿರುವ ಕುರಿತು:–

2017–18 ಸಾಲಿನಲ್ಲಿ ಪ್ರಾಧಿಕಾರದಲ್ಲಿ ಮಂಜೂರಾದ ಹುದ್ದೆಗಳು, ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ತಾತ್ಕಾಲಿಕ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯುತ್ತಿರುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿರುತ್ತವೆ.

ಕ್ರ.ಸಂ.	ವಿವರ	ಸಂಖ್ಯೆ
1	ಮಂಜೂರಾದ ಹುದ್ದೆ	43
2	ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ	21
3	ಖಾಲಿ ಇರುವ ಹುದ್ದೆ	22

ಪ್ರಾಧಿಕಾರದಿಂದ 2017–18ನೇ ಸಾಲಿನಲ್ಲಿ ಹೊರಗುತ್ತಿಗೆಯ ಆಧಾರದಲ್ಲಿ ಕಾರ್ಮಿಕರ ಸೇವೆಯನ್ನು ಪ್ರಾಂಪ್ಟ್ ಸೆಕ್ಯೂರಿಟಿ ಸರ್ವಿಸ್ ಇವರ ಮುಖಾಂತರ ಪಡೆಯಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಮುಖ ನೂನ್ಯತೆಗಳ ವಿವರ ಹೀಗಿದೆ.

1) 2017–18ನೇ ಸಾಲಿನಲ್ಲಿ ಟೆಂಡರ್ ಅಥವಾ ದರಪಟ್ಟಿಗಳನ್ನು ಕರೆಯದೇ ಕಾರ್ಮಿಕರ ಸೇವೆಯನ್ನು ಪಡೆದಿರುವುದು.

2) ಕೆಲಸ ಮಾಡಿದ ಕಾರ್ಮಿಕರ ಹಾಜರಾತಿ ಪಟ್ಟಿಯಲ್ಲಿ ದೃಢೀಕರಣ ಇರುವುದಿಲ್ಲ.

3) ಕೆಲವೊಂದು ಬಾರಿ ಏಜನ್ಸಿಯವರ ಹೆಸರಿನಲ್ಲಿ ಚೆಕ್ ಪಾವತಿಸದೇ ಏಜನ್ಸಿ ಮಾಲೀಕರ ಹೆಸರಿನಲ್ಲಿ (ಗುತ್ತಿಗೆದಾರರ) ಹಣವನ್ನು ಪಾವತಿ ಮಾಡಿರುವುದು.

4) ಕೆಲಸ ಮಾಡಿದ ಕಾರ್ಮಿಕರ **E.P.F & EST** ಮೊತ್ತವನ್ನು ಗುತ್ತಿಗೆದಾರರು ಅಥವಾ ಏಜನ್ಸಿಯವರು ಭರಣಾ ಮಾಡಿದ ವಿವರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವುದು.

ಸದರಿ ಮೇಲೆ ಹೇಳಿದ ಎಲ್ಲಾ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.1 ದಿನಾಂಕ: 14.01.2019 ರ ಪ್ರಕಾರ ಯಾವುದೇ ಸೂಕ್ತ ಅನುಸರಣೆ ನೀಡಿಲ್ಲ. ಕಾರಣ ರೂ.17,75,453/– ಗಳನ್ನು ಆಕ್ಷೇಪಿಸಲಾಗಿದೆ.

32) 2017–18 ನೇ ಸಾಲಿನಲ್ಲಿ ಪ್ರಾಧಿಕಾರದಿಂದ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಿ ಸ್ವೀಕೃತಗೊಂಡ ಮೊತ್ತದ ಕುರಿತು.

2017–18 ನೇ ಸಾಲಿನಲ್ಲಿ ಪ್ರಾಧಿಕಾರ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಿ ಒಟ್ಟು ರೂ.66105272/– ಗಳನ್ನು ಜಮೆ ಪಡೆದಿದ್ದು, **Receipt & Payment** ತಖ್ತೆ ಪ್ರಕಾರ ಕಂಡು ಬರುತ್ತದೆ. ಈ ಕುರಿತು ಸರ್ಕಾರಿ ಸಂಸ್ಥೆಗಳು ಹಾಗೂ ಪ್ರಾಧಿಕಾರ ನಿಗದಿಪಡಿಸಿದ ಉದ್ದೇಶಿತ ಸಂಸ್ಥೆಗಳಿಗೆ ನಿವೇಶನಗಳನ್ನು ಮೀಸಲಾತಿ ಪ್ರಕಾರ ನೀಡಿದ ಕಡತಗಳನ್ನು ಹಾಗೂ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ವಿಚಾರಣಾ ಪತ್ರ ಸಂಖ್ಯೆ:28 ದಿನಾಂಕ 21.01.2019 ಕ್ಕೆ ನೀಡಿದ ಅನುಸರಣೆಯ ಪ್ರಕಾರ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆಯಿಂದ ಬಂದ ಮೊತ್ತದ ತಃಖ್ತೆ (ಆಯುಕ್ತರ ಸಹಿ ಇಲ್ಲದೆ) ಮಾತ್ರ ಸಲ್ಲಿಸಿದ್ದು, ಯಾವುದೇ ಹಂಚಿಕೆ ದಾಖಲೆಗಳು ಪೂರೈಸಿಲ್ಲಾ ಕಾರಣ ದಾಖಲೆಗಳನ್ನು ಹಾಜರುಪಡಿಸಲು ತಿಳಿಸಿದೆ.

33) ಪ್ರಾಧಿಕಾರದಲ್ಲಿ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದ ರಜಿಸ್ಟರಗಳನ್ನು ನಿರ್ವಹಿಸುವ ಕುರಿತು:–

2017–18ನೇ ಸಾಲಿನ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಹಾಜರುಪಡಿಸಿದ್ದು, ರಜಿಸ್ಟರ್‌ಗಳನ್ನು ನಿರ್ವಹಿಸಿಲ್ಲ ವಿವರ ಕೆಳಕಂಡಂತಿದೆ.

1) ಕಾಮಗಾರಿಗಳ ಅಂದಾಜು ಪತ್ರಿಕೆಗಳ ರಜಿಸ್ಟರ್.
2) ಗುತ್ತಿಗೆ ಒಪ್ಪಂದ ಕರಾರು ಪತ್ರಗಳ ರಜಿಸ್ಟರ್.
3) ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆದ ರಜಿಸ್ಟರ್.
4) **EMD** ರಜಿಸ್ಟರ್.
5) ಕಾಮಗಾರಿಗಳಿಗೆ ಗುತ್ತಿಗೆದಾರರಿಂದ ಪಡೆದ ಭದ್ರತಾ ಠೇವಣಿ ಹಾಗೂ ಕಾಮಗಾರಿಯ ವ್ಯತ್ಯಾಸ ಮೊತ್ತಗಳನ್ನು ಸ್ವೀಕರಿಸಿದ ರಜಿಸ್ಟರ್.
6) ನಗರಾಭಿವೃದ್ಧಿ ವ್ಯಾಪ್ತಿಯಡಿ ಬರುವ ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಭಿಯಂತರರಿಂದ ಚೆಕ್ ಮೇಜರಮೆಂಟ್ ಪಡೆದ ರಜಿಸ್ಟರ್.
7) ಅಲ್ಲದೇ 2017–18 ನೇ ಸಾಲಿನ ಅನುದಾನ ವೆಚ್ಚ **(Grant and Outlay)** ಇತ್ಯಾದಿ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಸದರಿ ದಾಖಲೆಗಳನ್ನು ನಿರ್ವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

34) ಏಡ್ಸ್ ಪೀಡಿತರಿಗೆ ಆಶ್ರಯ ಮತ್ತು ಪೋಷಣೆಯ ಸಲುವಾಗಿ ಸ್ವಂತ ಕಟ್ಟಡ ನಿರ್ಮಿಸುವ ಕಾಮಗಾರಿಯಲ್ಲಿ ಕಂಡು ಬಂದ ನ್ಯೂನ್ಯತೆಗಳು :

2017–18ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಅಂದಾಜು ಟೆಂಡರಿಗೆ ಇಟ್ಟಿರುವ ವಿವರ ಈ ಕೆಳಗಿನಂತಿದೆ.

1) ಅಂದಾಜು ಮೊತ್ತ ರೂ. 2325000/–
2) ಟೆಂಡರ್‌ಗಿಟ್ಟ ಮೊತ್ತ ರೂ. 2059268/–
3) ಟೆಂಡರ್ ಮೊತ್ತ ರೂ. 1950841/–
4) ಗುತ್ತಿಗೆದಾರರ ಹೆಸರು : ಶ್ರೀ. ಆರ್.ಎಸ್.ಕಾಂಬಳೆ ಸಾ :ಬೆಳಗಾವಿ
5) ಗುತ್ತಿಗೆ ಒಪ್ಪಂದ ಪತ್ರ ಸಂಖ್ಯೆ BUDA/PWD/ETendor/W.o/2016-17/3696 dtd. 22.12.2016 (RA bill ಪ್ರಕಾರ)
6) ಕಾರ್ಯಾದೇಶ ನೀಡಿದ ದಿನಾಂಕ : 03.01.2017
7) ಕಾಮಗಾರಿ ಮುಕ್ತಾಯಗೊಳ್ಳಬೇಕಾದ ದಿನಾಂಕ: 02.10.2017
8) ಕಾಮಗಾರಿ ಮುಕ್ತಾಯಗೊಂಡ ದಿನಾಂಕ: ಸಿ.ಸಿ.ಯಲ್ಲಿ ದಿನಾಂಕ ನಮೂದಿಸಿಲ್ಲ.

ಪ್ರಸ್ತುತ ಸಾಲಿನಲ್ಲಿ ಆರ್.ಎ.ಬಿಲ್ ಭಾಗ–1 ಒಟ್ಟು ಮೊತ್ತ ರೂ.1831718/– ಕಡಿತಗಳು ರೂ.180800/– ನಿವ್ವಳ ಮೊತ್ತ ರೂ. 1650918/– ಹಾಗೂ ಆರ್.ಎ.ಬಿಲ್ 2 ಮತ್ತು ಅಂತಿಮ ಒಟ್ಟು ಮೊತ್ತ ರೂ. 875410/– ಕಡಿತಗಳು ರೂ. 29191/– ನಿವ್ವಳ ಮೊತ್ತ ರೂ. 846219/– ಇದ್ದು ಒಟ್ಟಾರೆ ರೂ. 2707128/– ಪಾವತಿಸಿದ್ದು, ಎರಡು ಆರ್.ಎ. ಬಿಲ್‌ಗಳ ಮುಖಾಂತರ ಎಕ್ಸಿಕ್ಯೂಟ್ ಮಾಡಿರುವ ಐಟಂಗಳ ಪ್ರಮಾಣಗಳು ಶೇ 125% ಕ್ಕಿಂತ ಹೆಚ್ಚಿಗೆ ಇದ್ದು ವರ್ಕ ಸ್ಲೀಪ್ ನಲ್ಲಿ ಕಾರ್ಯನಿರ್ವಾಹಕ ಅಭಿಯಂತರರು ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ಇವರು ಅನುಮೋದನೆ ನೀಡಿದ್ದು, ಸದರಿ ಅಧಿಕಾರಿಯೇ ಕಾಮಗಾರಿಯ ತಾಂತ್ರಿಕ ಅನುಮೋದನೆಯನ್ನು ಸಹಾ ನೀಡಿರುತ್ತಾರೆ. ಪಿಡಬ್ಲ್ಯೂಡಿ ಡಿಕೋಡ್ ಭಾಗ–1 ನಿಯಮ 184(2) ಹಾಗೂ ನಿಯಮ 221 ಪ್ರಕಾರ ಶೇ.125% ಗಿಂತ ಹೆಚ್ಚಿನ ಪ್ರಮಾಣಕ್ಕೆ ಅಧೀಕ್ಷಕ ಅಭಿಯಂತರರ ಅನುಮೋದನೆ ಅವಶ್ಯಕತೆ ಇರುತ್ತದೆ.

C) work slip amount upto 125% Rs. 190740.15

b) work slip amount 125% above Rs. 287051.21

1) ಪ್ರಸ್ತುತ ಸಾಲಿನಲ್ಲಿ ಅಂದಾಜು ಪತ್ರಿಕೆಯಲ್ಲಿ ಲಭ್ಯವಿರುವ ಐಟಂಗಳನ್ನು ಇ.ಆಯ್.ಆರ್.ಎಲ್. ಪ್ರಕಾರ ರೂ. 299283.69 ಇದ್ದು, ಈ ಕುರಿತು ಐಟಂಗಳನ್ನು ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 55(49) ಪ್ರಕಾರ ದರಪಟ್ಟಿ ಆಹ್ವಾನಿಸಿ ಕಾಮಗಾರಿ ಕೈಗೊಂಡ ಬಗ್ಗೆ ಸೂಕ್ತ ದಾಖಲೆಗಳು ಲಭ್ಯವಿರುವುದಿಲ್ಲ.

2) **KLESCET CONSULTANTS** ಬೆಳಗಾವಿ ಇವರು ದಿನಾಂಕ:12.01.2018ರಂದು ಸದರಿ ಕಾಮಗಾರಿಯ 3ನೇ ವ್ಯಕ್ತಿ ತಪಾಸಣೆ ವರದಿ ನೀಡಿದ್ದು, ಸದರಿಯವರು ಕಾಮಗಾರಿ ಉಲ್ಲೇಖವನ್ನು **BUDA/PWD/E-TENDER/ 2016–17/4221 DTD. 18.03.2017** ಎಂದು ದಾಖಲಿಸಿದ್ದು, ಆರ್.ಎ. ಬಿಲ್ಲುಗಳಲ್ಲಿ ದಾಖಲಿಸಿದ ಹಾಗೂ ವಾಸ್ತವಿಕವಾಗಿರುವ ಒಪ್ಪಂದ ಪತ್ರದ ದಿನಾಂಕ:22.12.2016 ಹಾಗೂ ದಿನಾಂಕ:18.07.2017 ಗಳಿಗೆ ವ್ಯತಿರಿಕ್ತವಾಗಿದೆ. ಈ ಕುರಿತು ವಿವರಣೆ ನೀಡುವುದು ಅಲ್ಲದೆ ಸದರಿ ವರದಿಯಲ್ಲಿ ಕೇವಲ ಅಂದಾಜು ಮೊತ್ತ ಮಾತ್ರ ನಮೂದಿಸಿದ್ದು, ಕಾಮಗಾರಿ ಪೂರ್ಣಗೊಂಡ ಮೊತ್ತವನ್ನು ದಾಖಲಿಸಿರುವುದಿಲ್ಲ.

3) ಕಾಮಗಾರಿಗೆ ಸಂಬಂಧಿಸಿದ ಪೂರ್ಣತಾ ಪ್ರಮಾಣ ಪತ್ರ ಪಿ.ಡಬ್ಲುಜಿ–47 ನಲ್ಲಿ ಕಾಮಗಾರಿ ಪೂರ್ಣಗೊಂಡ ದಿನಾಂಕವನ್ನು ನಮೂದಿಸಿರುವುದಿಲ್ಲ ಹಾಗೂ ಸದರಿ ಕಾಮಗಾರಿಯನ್ನು ಪ್ರಾಧಿಕಾರಕ್ಕೆ ಯಾವ ದಿನಾಂಕದಂದು ಹಸ್ತಾಂತರಿಸಿದ್ದಾರೆ ಎಂಬುದರ ಬಗ್ಗೆ ಕುಡಾ ಮಾಹಿತಿ ಹಾಜರುಪಡಿಸಿಲ್ಲ.

4) ಸದರಿ ಕಾಮಗಾರಿಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ ಎಂದು ಟೆಂಡರ್ ಪ್ರಕಟಣೆ ದಿನಾಂಕ: 01.07.2016ರ ಪ್ರಕಾರ ಪ್ರಕಟಣೆ ಮಾತ್ರ ಲಭ್ಯವಿದ್ದು, ಪತ್ರಿಕಾ ಪ್ರಕಟಣೆಗಳು, ಜಿಲ್ಲಾ ಟೆಂಡರ್ ಬುಲೆಟಿನ್ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಎಫ್.ಡಿ.9ಪಿ.ಸಿ.ಎಲ್ 2004 ⅆ ದಿನಾಂಕ: 06.08.2005 ಪ್ರಕಾರ **Standard tender Document KW-1** ನಲ್ಲಿ ಗುತ್ತಿಗೆದಾರರು ಹಾಗೂ ಪ್ರಾಧಿಕಾರ ಒಪ್ಪಂದದ ಬಗ್ಗೆ ದಾಖಲೆಗಳು ಹಾಜರುಪಡಿಸಿಲ್ಲ.

5) ಸದರಿ ಕಾಮಗಾರಿಯನ್ನು ಇ ಪ್ರಕ್ಯೂರಮೆಂಟ್ ಮೂಲಕ ನಿರ್ವಹಿಸಿದ್ದು, **EMD verification Report Technical Bid evaluation Report, Financial Bid evaluation report** ಹಾಗೂ ಇ ಪ್ರಕ್ಯೂರಮೆಂಟ್‌ನ ಹಂತ ಹಂತವನ್ನು ವಿವರಿಸುವ ಟಾಸ್ಕ ಬಾರ್ ವಿವರಣೆ ಲಭ್ಯವಿರುವುದಿಲ್ಲ.

6) ಸದರಿ ಕಾಮಗಾರಿಯಲ್ಲಿ 4 ಗುತ್ತಿಗೆದಾರರು ಭಾಗವಹಿಸಿದ್ದು ಶ್ರೀ. ರವೀಂದ್ರ ಎಸ್. ಕಾಂಬಳೆ ಇವರಿಗೆ ಗುತ್ತಿಗೆಯನ್ನು ನೀಡಲಾಗಿದೆ. ಈ ಕುರಿತು ಕೆಡಬ್ಲು–1ನಲ್ಲಿ ವಿವರಿಸಿದಂತೆ ತಾಂತ್ರಿಕ ಪರಿಶೀಲನೆಯಲ್ಲಿ ಗುತ್ತಿಗೆದಾರರು ಟಾರ್ಗೆಟ್ ಸ್ಟಿಪ್ಯೂಲೇಟೆಡ್‌ಕ್ಕಿಂತ ಹೆಚ್ಚಿಗೆ ಅರ್ಹತೆ ಹೊಂದಿರುತ್ತಾರೆ ಎಂದು ಪರೀಕ್ಷಿಸಲು **Assessed available tenders capacity** ಮಾಹಿತಿ ಹಾಜರುಪಡಿಸಿಲ್ಲ.

ಮುಂದುವರೆದು **substantively technically responsive tender** ಗಳಿಗೆ ಮಾತ್ರ ಆರ್ಥಿಕ ಬಿಡ್ಡಿನಲ್ಲಿ ಪರಿಶೀಲನೆ ಕೈಗೊಳ್ಳುವುದು ಎಂದು ಪಾರದರ್ಶಕತೆ ಕಾಯ್ದೆ 1999ನಲ್ಲಿ ತಿಳಿಸಲಾಗಿದ್ದು ಪ್ರಾಧಿಕಾರ ಈ ಕುರಿತು ಗುತ್ತಿಗೆ ನೀಡುವಾಗ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಿಲ್ಲ.

7) ಕಾಮಗಾರಿ ಪೂರ್ಣಗೊಂಡ ನಂತರ ಲಭ್ಯವಿರುವ ಇನ್ ಬಿಲ್ಟ್ ಡೈಗ್ರಾಂಗಳನ್ನು ದಾಖಲೆಗಳೊಂದಿಗೆ ಲಗತ್ತಿಸಿರುವುದಿಲ್ಲ ಹಾಗೂ ಕಾಮಗಾರಿ ಒಪ್ಪಂದ ಪತ್ರ ದಿನಾಂಕ: 22.12.2016 ಮತ್ತು 18.07.2017ರ ಇ.ಆಯ್.ಆರ್.ಎಲ್ ಒಪ್ಪಂದ ಪತ್ರಗಳ ಷರತ್ತುಗಳಲ್ಲಿ ತಿಳಿಸಿದಂತೆ ಒಪ್ಪಂದ ಪತ್ರದ ಅವಿಭಾಜ್ಯ ಅಂಗವಾದ ಕಾಂಟ್ರೆಕ್ಟ್ ಡಾಟಾ (ಫಾರ್ಮ ನಂ.6) **Conditions of contract Bills of quantities** ದಾಖಲೆಗಳು ಹಾಜರುಪಡಿಸಿಲ್ಲ.

8) ಸದರಿ ಕಾಮಗಾರಿಗೆ ಟೆಂಡರ್ ಮೊತ್ತ ರೂ. 1950841/- ಇದ್ದು ಒಟ್ಟಾರೆ ಆರ್.ಎ.ಬಿಲ್ ಪ್ರಕಾರ ವೆಚ್ಚ ರೂ. 2707128/- ಇರುತ್ತದೆ. ಅಂದರೆ ಶೇ 39% ಹೆಚ್ಚಳ ಆಗಿದೆ. ಈ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ಇರುವುದಿಲ್ಲ.

ಈ ಮೇಲಿನ ಎಲ್ಲ ನ್ಯೂನತೆಗಳ ಬಗ್ಗೆ ಸೂಕ್ತ ಅನುಸರಣೆ ನೀಡುವುದು ಹಾಗೂ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಇರುವ **Work slip** ಮೊತ್ತ ರೂ.6,47,860/- ಗಳನ್ನು ಸೂಕ್ತ ದಾಖಲೆಗಳನ್ನು ಹಾಜರುಪಡಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

35) ಯೋಜನೆ ಸಂ.13 ದೂರದರ್ಶನ ನಗರದಲ್ಲಿಯ ಬಾಸ್ಕೇಟ್ ಬಾಲ್ ಮತ್ತು ವಾಲಿಬಾಲ್ ಕೋರ್ಟುಗಳ ಸುತ್ತಲೂ ಚೇನ್‌ಲಿಂಕ್ ಫೆನ್ಸಿಂಗ್ ಅಳವಡಿಸುವುದು ಕಾಮಗಾರಿಯ ವಿಳಂಬಕ್ಕೆ ದಂಡ ಕಟಾಯಿಸದೇ ಇರುವುದು :-

ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.24,50,000/- ಇದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 6ಜನ ಗುತ್ತಿಗೆದಾರರು ಭಾಗವಹಿಸಿದ್ದು, ಕಾಮಗಾರಿಯನ್ನು ಕಡಿಮೆ ದರ ನಮೂದಿಸಿದ ಶ್ರೀ. ಎಸ್.ಕೆ.ಧೋತರೆ ಗುತ್ತಿಗೆದಾರರು ಇವರಿಗೆ ವಹಿಸಿಕೊಡಲಾಗಿದೆ. ಟೆಂಡರ್ ಮೊತ್ತ ರೂ.16,14,192.18 ಇದ್ದು ಕಾಮಗಾರಿ ಆದೇಶವನ್ನು ದಿನಾಂಕ: 03.01.2016 ರಂದು ನೀಡಿದ್ದು, ಕಾಮಗಾರಿ ಆದೇಶದ ಪ್ರಕಾರ ಕಾಮಗಾರಿಗೆ 3 ತಿಂಗಳು ಕಾಲಾವಕಾಶ ನೀಡಿದ್ದು, ಕಾಮಗಾರಿಯು ದಿನಾಂಕ: 02.04.2016 ರಂದು ಮುಕ್ತಾಯಗೊಳ್ಳಬೇಕಿತ್ತು. ಆದರೆ ಕಾಮಗಾರಿಯು ವಾಸ್ತವವಾಗಿ ದಿನಾಂಕ: 28.12.2016ರಂದು ಮುಕ್ತಾಯಗೊಂಡಿದ್ದು, ಒಟ್ಟು 239 ದಿನಗಳು ವಿಳಂಬವಾಗಿರುತ್ತದೆ. ಕಾರಣ ಈ ಬಗ್ಗೆ ಅವಧಿ ವಿಸ್ತಣೆ ಪಡೆದುಕೊಂಡ ಬಗ್ಗೆ ಮತ್ತು ವಿಳಂಬಕ್ಕೆ ದಂಡ ವಸೂಲಾತಿ ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಲು ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.16 ದಿನಾಂಕ:19.01.2019 ರ ಪ್ರಕಾರ ಸೂಚಿಸಲಾಗಿದ್ದು, ಯಾವುದೇ ಅನುಸರಣೆ ಸ್ವೀಕೃತಿಗೊಂಡಿಲ್ಲ. ವಿವರ ಈ ಕೆಳಕಂಡಂತಿದೆ.

ಕ್ರ ಸಂ.	ಟೆಂಡರ್ ಮೊತ್ತ	ಕಾರ್ಯಾದೇಶ ನೀಡಿದ ದಿನಾಂಕ	ಕಾಮಗಾರಿ ಮುಕ್ತಾಯವಾಗಬೇಕಾದ ದಿನಾಂಕ	ವಾಸ್ತವವಾಗಿ ಕಾಮಗಾರಿ ಮುಗಿದ ದಿನಾಂಕ	ವಿಳಂಬದ ದಿನಗಳು	ಷರಾ
1	16,14,192	03-01-2016	02-04-2016	28-12-2016 (ಅಳತೆ ಪುಸ್ತಕ ಸಂ. 9878 ಪ್ರಕಾರ)	239	ಮುಕ್ತಾಯ ಪ್ರಮಾಣ ಪತ್ರ ಲಗತ್ತಿಸಿಲ್ಲ

ಕಾರಣ ವಿಳಂಬವಾದ ಅವಧಿಗೆ ಟೆಂಡರ್ ಮೊತ್ತಿನ ಶೇ.0.1% ರಂತೆ ದಂಡ ರೂ.3,85,792/- ಆಗುತ್ತಿದ್ದು, ಟೆಂಡರ್‌ನ ಗರಿಷ್ಠ ಮಿತಿ ಶೇ.10% ಕ್ಕೆ ದಂಡದ ಮೊತ್ತವನ್ನು ಸೀಮಿತಗೊಳಿಸಿ ರೂ.1,61,419/- ಗಳನ್ನು ವಸೂಲಾತಿಗೆ ಸೂಚಿಸಿದೆ.

36) ಪ್ರಾಧಿಕಾರದ ಆಡಳಿತ ಕಚೇರಿಯ ಉತ್ತರ ಭಾಗದ ಮೊದಲನೇ ಮಹಡಿಯ ಕಟ್ಟಡದ ಮುಂದುವರಿಕೆ ಕಾಮಗಾರಿಯಡಿ ಕಂಡು ಬಂದ ನ್ಯೂನ್ಯತೆಗಳು.

2017–18 ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಅಂದಾಜು ಮೊತ್ತ, ಟೆಂಡರಿಗಿದ್ದ ಮೊತ್ತ, ಒಟ್ಟು ಮೊತ್ತ, ಇನ್ನಿತರ ವಿವರಣೆಗಳು ಈ ಕೆಳಗಿನಂತಿವೆ.

1) ಅಂದಾಜು ಮೊತ್ತ ರೂ.24.95 ಲಕ್ಷ
2) ಟೆಂಡರ್ ಒಪ್ಪಂದದ ಮೊತ್ತ ರೂ.21,19,907.25
3) ಆರ್.ಎ. ಬಿಲ್ 1 & ಫೈನಲ್ ವೆಚ್ಚ ರೂ.20,66,049.61
4) ಗುತ್ತಿಗೆದಾರರ ಹೆಸರು: ಶ್ರಿ ಎನ್.ಎಸ್. ಬಿರಾದಾರ
5) ಗುತ್ತಿಗೆದಾರರ ಒಪ್ಪಂದ ಪತ್ರ: BUDA/PWD/E Tender/2016–17/637 ದಿ:11.05.2017
6) ಕಾರ್ಯಾದೇಶ ನೀಡಿದ ದಿನಾಂಕ:11.05.2017
7) ಕಾಮಗಾರಿ ಮುಕ್ತಾಯಗೊಳ್ಳಬೇಕಾದ ದಿನಾಂಕ:06.11.2017
8) ಕಾಮಗಾರಿ ಮುಕ್ತಾಯಗೊಂಡ ದಿನಾಂಕ:26.10.2017

ಈ ಕಾಮಗಾರಿ ಬಿಲ್ಲುಗಳಲ್ಲಿ ಕಂಡು ಬಂದ ನ್ಯೂನ್ಯತೆಗಳು ಈ ಕೆಳಗಿನಂತಿವೆ.

1) ಕಾಮಗಾರಿ ಅಂದಾಜು ಪತ್ರಿಕೆಯಲ್ಲಿ **Work Charge establishment and Tender Premium** ಮೊತ್ತ ರೂ.188915/– ದಾಖಲಿಸಿದ್ದು, ಇದಕ್ಕೆ ವಿವರಣೆ ನೀಡಿಲ್ಲ.

2) ಸದರಿ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಿರ್ವಹಿಸಿದ್ದು, ಇಂಡೆಂಟ್ ಸಂ. **BGMUDA/2016-17/BD/Works** ಇಂಡೆಂಟ್ 162 **EMD verification** ಹಾಗೂ **Financial Bid verification Dashboard** ಗಳು ಮಾತ್ರ ಲಭ್ಯವಿದ್ದು, ತಾಂತ್ರಿಕ ಬಿಡ್ ಪರಿಶೀಲಿಸಿ ಕೈಗೊಂಡ ನಡಾವಳಿಗಳು ಹಾಗೂ **Dashboard** ಹಾಜರುಪಡಿಸಿಲ್ಲ.

3) ಸದರಿ ಕಾಮಗಾರಿ ಒಪ್ಪಂದ ಪತ್ರ ದಿ:17.05.2017 ರಲ್ಲಿ ಒಪ್ಪಂದ ಪತ್ರದೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕಾದ ಕಾಂಟ್ರಾಕ್ಟ್ ಡಾಟಾ, ಕಂಡಿಷನ್ ಆಫ್ ಕಾಂಟ್ರಾಕ್ಟ್, **BOQ** ಹಾಜರುಪಡಿಸಿಲ್ಲ.

4) ಕಾಮಗಾರಿ ಪೂರ್ಣಗೊಂಡ ಬಗ್ಗೆ **PWG –47** ನಲ್ಲಿ (ಹೊಸ ನಮೂನೆ **81, 82, 83**) ಪೂರ್ಣತಾ ಪ್ರಮಾಣ ಪತ್ರ ನೀಡಿರುವ ದಾಖಲೆಗಳು ಹಾಜರುಪಡಿಸಿಲ್ಲ.

5) ಸದರಿ ಕಾಮಗಾರಿಗೆ ಅಂದಾಜು ಪತ್ರಿಕೆ **PWD SR 16–17** ಧಾರವಾಡ ವಲಯ ಉಪಯೋಗಿಸಿದ್ದು, ಕಾಮಗಾರಿಯು ಬೆಳಗಾವಿ ವ್ಯಾಪ್ತಿಯಲ್ಲಿದ್ದು, ಬೆಳಗಾವಿ **PWD SR** ಉಪಯೋಗಿಸದೇ ಇರುವ ಬಗ್ಗೆ ವಿವರಿಸಿಲ್ಲ.

6) ಕಾಮಗಾರಿ ಆರ್.ಎ. ಬಿಲ್ಲುಗಳಲ್ಲಿ ಐಟಂಗಳ ಪ್ರಮಾಣಗಳಲ್ಲಿ ವ್ಯತ್ಯಾಸದ ಕುರಿತು:–

- ಐಟಂ ನಂ.4 Providing & laying of cement concrete down size graded granite metal coarse aggregates at the rate 0.878 CUM ವಿವರಣೆ ಒಳಗೊಂಡ ಐಟಂ ಶೆಡ್ಯೂಲ್–ಬಿ ನಲ್ಲಿ ಮಾಹಿತಿ ನೀಡಿಲ್ಲ.
- ಅಂದಾಜು ಪತ್ರಿಕೆಯಲ್ಲಿರುವ 5&6 ಐಟಂನ ಸ್ಯಾಟ್ Length & Breadth ಅಳತೆ ಪುಸ್ತಕದಲ್ಲಿರುವ Length & Breadth ಗೆ ವ್ಯತ್ಯಾಸವಿರುತ್ತದೆ.

- ಐಟಂ ನಂ.7 ಅಂದಾಜು ಪತ್ರಿಕೆಯಲ್ಲಿ ಸದರಿ ಐಟಂನಲ್ಲಿ ಒಟ್ಟು 28 ಯುನಿಟ್‌ಗಳಿದ್ದು, Pre- Measurement ಅಳತೆ ಪುಸ್ತಕ ಹಾಗೂ ಅಳತೆ ಪುಸ್ತಕದಲ್ಲಿ 30 ಯುನಿಟ್ ಗಳು ಇರುತ್ತವೆ. ಹೆಚ್ಚುವರಿ ಯುನಿಟ್‌ಗಳಿಗೆ ಅನುಮೋದನೆ ಪಡೆದ ಮಾಹಿತಿ ಹಾಜರುಪಡಿಸಿಲ್ಲ.
- ಐಟಂ ನಂ.10 ಅಂದಾಜು ಪತ್ರಿಕೆಯಲ್ಲಿರುವ ಐಟಂನ Length & dia meter ಅಳತೆಗಳನ್ನು ಮಾತ್ರ ನಮೂದಿಸಿದ್ದು, ಅಳತೆ ಪುಸ್ತಕದಲ್ಲಿ Length & Breadth ಇರುತ್ತವೆ.
- ಐಟಂ ನಂ.12 Providing & Construction burnt brick masonry for basement (BBM)

ಕ್ರ.ಸಂ.	ಕಡತ	ಪರಿಮಾಣ	ದರ	ಮೊತ್ತ
1	ಅಂದಾಜು ಪತ್ರಿಕೆ	32-92 cum	5791.80	190665.48
2	Pre-Measurement MS & MB	50-78 cum	5200	2644056

ಹೆಚ್ಚುವರಿ ಪರಿಮಾಣ 17.86 x ದರ 5200 = ಹೆಚ್ಚುವರಿ ಮೊತ್ತ ರೂ. 92872 ಗಳನ್ನು ವಸೂಲಿಸುವುದು.

- ಐಟಂ ನಂ.17 **Providing 18mm thick cement plaster** ಕುರಿತು.

ಕ್ರ.ಸಂ.	ಕಡತ	ಪರಿಮಾಣ	ದರ	ಮೊತ್ತ
1	ಅಂದಾಜು ಪತ್ರಿಕೆ	246.13 Sq.mtr	230	56609.90
2	ಅಳತೆ ಪುಸ್ತಕ Pre-Measurement	665.05 cum	230	15961.50

ಅಂದಾಜು ಪತ್ರಿಕೆ ಮತ್ತು ಅಳತೆ ಪುಸ್ತಕಗಳಲ್ಲಿ ಕಾಮಗಾರಿ ಅಳತೆಗಳನ್ನು ಬೇರೆ ಬೇರೆ ಪರಿಣಾಮಗಳಲ್ಲಿ ದಾಖಲಿಸಿದ್ದು, ಈ ವ್ಯತ್ಯಾಸಕ್ಕೆ ವಿವರಗಳನ್ನು ಹಾಜರುಪಡಿಸಿರುವುದಿಲ್ಲ.

- ಈ ಬಗ್ಗೆ ವಿವರಣೆ ನೀಡಲು ಮತ್ತು ಈ ಮೇಲಿನ ನ್ಯೂನತೆಗಳಿಗೆ ಮಾಹಿತಿ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ: 23 ದಿನಾಂಕ:19.01.2019ಕ್ಕೆ ಪ್ರಾಧಿಕಾರದಿಂದ ಸೂಕ್ತ ವಿವರ ಒದಗಿಸದ ಕಾರಣ ಸಮರ್ಥನೀಯವಾದ ಅನುಸರಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಹಾಜರುಪಡಿಸುವ ವರೆಗೆ ಕಾಮಗಾರಿಯ ಟೆಂಡರ್ ಮೊತ್ತ ರೂ.21,19,907.25 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಮತ್ತು ರೂ.92,872/- ಗಳನ್ನು ವಸೂಲಾತಿಯಲ್ಲಿ ಇಡಲಾಗಿದೆ.

37) ಬೆಳಗಾವಿ ನಗರದ ಯೋಜನೆ ಸಂಖ್ಯೆ: 35+43+43ಎ ರಾಮತೀರ್ಥ ನಗರದ ಹರ್ಷಾ ಹೋಟೆಲ್‌ದಿಂದ ಉದಯ ಹೈಸ್ಕೂಲ್‌ವರೆಗೆ ರಸ್ತೆ ಅಭಿವೃದ್ದಿಪಡಿಸುವುದು ಕಾಮಗಾರಿಯ ನ್ಯೂನ್ಯತೆಗಳ ಕುರಿತು :

ಸದರಿ ಕಾಮಗಾರಿಯ ವಿವರ ಈ ಕೆಳಗಿನಂತಿದೆ :

1) ಅಂದಾಜು ಮೊತ್ತ ರೂ. 99.50 ಲಕ್ಷ
2) ಇಂಡೆಂಟ್ ಸಂಖ್ಯೆ: **BGMUDA/16-17/OW/work-Indent144**
3) ತಾಂತ್ರಿಕ ಅನುಮೋದನೆ ಸಂಖ್ಯೆ **BUDA 3 for 2016-17**
4) ಟೆಂಡರಗಿಟ್ಟ ಮೊತ್ತ 99.55 ಲಕ್ಷ

5) ಟೆಂಡರ್ ಪ್ರಕಟಣೆ ದಿನಾಂಕ: 16.04.2016

6) ಟೆಂಡರ್ ಸ್ವೀಕರಿಸುವ ಕೊನೆ ದಿನಾಂಕ: 16.05.2016

7) ಕಾಮಗಾರಿ ನೀಡಿದ ಅವಧಿ : 6 ತಿಂಗಳು

8) ಕಾಮಗಾರಿ ಪ್ರಾರಂಭ ಮಾಡಿದ ದಿನಾಂಕ: 11.11.2016

9) ಕಾಮಗಾರಿ ಮುಕ್ತಾಯಗೊಳ್ಳಬೇಕಾದ ದಿನಾಂಕ: 07.05.2017

10) ವಾಸ್ತವವಾಗಿ ಕಾಮಗಾರಿ ಪೂರ್ಣಗೊಂಡ ದಿನಾಂಕ: 12.05.2017

11) ಗುತ್ತಿಗೆದಾರರ ಹೆಸರು ಮೆ: ಕೆ.ಎಸ್.ಮಮದಾಪೂರ & ಬ್ರದರ್ಸ ಸಾ: ಬೆಳಗಾವಿ

12) ಆರ್.ಎ.ಬಿಲ್ 2ನೇ ಮತ್ತು ಫಾರ್ಟ ಬಿಲ್ಲಿನ ಮೊತ್ತ ರೂ. 3530697/– ಕಡಿತಗಳು ರೂ. 455239/– ನಿವ್ವಳ ಮೊತ್ತ ರೂ.3075458/–

13) ಆರ್.ಇ.ಎ.ಬಿಲ್ ಥರ್ಡ & ಫೈನಲ್ ಬಿಲ್ಲಿನ ಮೊತ್ತ ರೂ.1625725/– ಕಡಿತಗಳು 115427/– ನಿವ್ವಳ ಮೊತ್ತ ರೂ.1510298/–

ಈ ಕಾಮಗಾರಿಯಲ್ಲಿನ ನ್ಯೂನ್ಯತೆಗಳು ಈ ಕೆಳಗಿನಂತಿವೆ :

(ಪ್ರಸಕ್ತ ಸಾಲಿನಲ್ಲಿ ಪಾವತಿಸಿದ ಒಟ್ಟು ಕಾಮಗಾರಿ ಮೊತ್ತ ರೂ. 5156422/–)

1) ಸದರಿ ಕಾಮಗಾರಿಯ ತಾಂತ್ರಿಕ ಮೌಲ್ಯಮಾಪನ ಪಟ್ಟಿ ಪರಿಶೀಲಿಸಲಾಗಿ 8 ಗುತ್ತಿಗೆದಾರರು ಭಾಗವಹಿಸಿದ್ದು, ಶ್ರೀ. ಕೆ.ಎಸ್. ಮಮದಾಪುರ & ಬ್ರದರ್ಸ ಇವರಿಗೆ ತಾಂತ್ರಿಕವಾಗಿ ಒಪ್ಪಿ ಆರ್ಥಿಕ ಬಿಡ್‌ನಲ್ಲಿ ಅನುಮೋದನೆ ನೀಡಿ ಟೆಂಡರ್ ನೀಡಲಾಗಿದೆ. ಆದರೆ ತಾಂತ್ರಿಕ ಬಿಡ್ ಶಿಫಾರಸ್ಸಿನಲ್ಲಿ ಟೆಂಡರ್ ಕ್ಲಾಸ್ ಸಂಕ್ಯೆ: 3.3ಎ ಅರ್ಹತೆ ಹೊಂದಿರುವುದಿಲ್ಲ ಅಂಥಾ ತಿಳಿಸಿದ್ದು, ಶ್ರೀ. ಎಸ್.ಡಿ.ಹಮ್ಮಿನಿ ಹಾಗೂ ಪಿ.ಎಮ್. ಪಾಟೀಲ ಗುತ್ತಿಗೆದಾರರುಗಳ ಬಿಡ್ ಮೊತ್ತ ತಾಂತ್ರಿಕವಾಗಿ ಎಲ್ಲ ಅರ್ಹತೆಗಳಿದೆ ಎಂದು ಶಿಫಾರಸ್ಸು ಮಾಡಲಾಗಿದೆ. ಶ್ರೀ. ಕೆ.ಎಸ್.ಮಮದಾಪೂರ ಇವರ ಬಿಲ್ 3.3ಅ ನಲ್ಲಿ ಅರ್ಹತೆ ಹೊಂದದೆ ಇದ್ದರೂ ಹೇಗೆ ಒಪ್ಪಲಾಯಿತು ಎಂಬುದರ ಬಗ್ಗೆ ವಿವರ ಹಾಜರುಪಡಿಸಿಲ್ಲ.

2) ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ.56 ಪಿ.ಆರ್.ಓ.ಸೆಲ್ 2004 ಬೆಂಗಳೂರು ದಿನಾಂಕ: 18.01.2005 ರ ಪ್ರಕಾರ ರೂ. 25 ಲಕ್ಷ ಮೇಲಿನ ಕಾಮಗಾರಿಗಳಿಗೆ ಕಡ್ಡಾಯವಾಗಿ ಸಿ.ಎಮ್.ಬಿ.ಮೂಲಕ ಸ್ಪೇಡ್ ಶೀಟ್ ತಯಾರಿಸಿ ಗುತ್ತಿಗೆದಾರ ಸಹಿ ಪಡೆದು ಸಿ.ಎಮ್.ಬಿ. ಮೂಲಕ ತಿಳಿಸಲಾಗಿದ್ದು, ಪ್ರಸ್ತುತ ಕಾಮಗಾರಿಯಲ್ಲಿ ಆರ್.ಎ.ಬಿಲ್ & 2ನೇ & ಫಾರ್ಟ ಅಳತೆ ಪುಸ್ತಕ ಸಂಖ್ಯೆ: 385 ಪುಟ ಸಂಖ್ಯೆ: 31 ರಿಂದ 42 ಹಾಗೂ ಆರ್.ಎ.ಬಿಲ್ 3ನೇ & ಫೈನಲ್ ಅಳತೆ ಪುಸ್ತಕ ಆ: 385 ಪುಟ ಸಂಖ್ಯೆ: 43 ರಿಂದ 49 ರವರೆಗೆ ದಾಖಲಿಸಿದ್ದಾಗಿ ತಿಳಿಸಿದ್ದು, ಸರ್ಕಾರದ ಆದೇಶ ಪಾಲನೆ ಮಾಡಿರುವುದಿಲ್ಲ.

3) ಗುತ್ತಿಗೆದಾರರಿಗೆ ಆಯುಕ್ತರ ನೋಟಿಸ್ ಸಂಖ್ಯೆ: ಬೆನಪ್ರಾ/ಲೊಶಾ/ನೋಟಿಸ್/2017–18 ದಿನಾಂಕ: 11.04.2017 ರ ಪ್ರಕಾರ ನೋಟಿಸು ನೀಡುತ್ತಾ ಕಾಮಗಾರಿಗೆ ಸಂಬಂಧಿಸಿದಂತೆ ಜಿ.ಎಸ್.ಬಿ.+ಡಬ್ಲು.ಎಮ್.ಎಮ್.ದ ಥಿಕ್‌ನೆಸ್ ಗಳು ಸರಿಯಾಗಿ ಇರುವುದಿಲ್ಲ. ಇದನ್ನು ಸರಿಪಡಿಸಿ ಥರ್ಡ ಪಾರ್ಟಿ ಅವರಿಂದ ದೃಢೀಕರಿಸಿ ವರದಿ ಮಂಡಿಸುವುದು ಎಂದು ತಿಳಿಸಿದ್ದು, ಈ ಕುರಿತು ಗುತ್ತಿಗೆದಾರರು ಯಾವ ಸುಧಾರಣಾ ಕ್ರಮ ಜರುಗಿಸಿದ್ದಾರೆ ಎಂಬ ಮಾಹಿತಿಯನ್ನು ಹಾಗೂ ಮೇಲಿನ ನ್ಯೂನತೆಗಳಿಗೆ ಉತ್ತರಿಸಲು ಕೋರಿ ನೀಡಲಾದ ವಿಚಾರಣಾ ಪತ್ರ ಸಂ.31 ದಿ: 25.01.2019 ಗೆ ಉತ್ತರ ನೀಡಿರುವುದಿಲ್ಲ.

ಕಾರಣ ಈ ಮೇಲೆ ತಿಳಿಸಿದ ನ್ಯೂನತೆಗಳಿಗೆ ಸಮರ್ಥನೀಯವಾದ ಅನುಸರಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಹಾಜರುಪಡಿಸುವವರೆಗೆ ಕಾಮಗಾರಿಯ ಟೆಂಡರ್ ಮೊತ್ತ ರೂ.99,55,000/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

38) 2017–18ನೇ ಸಾಲಿನಲ್ಲಿ ಪ್ರಾಧಿಕಾರದ ಅಧೀನ ಯೋಜನೆಗಳ ಆವರಣದಲ್ಲಿ ಬೀದಿ ದೀಪ ನಿರ್ವಹಣೆ ಕುರಿತು :

2017–18ನೇ ಸಾಲಿನಲ್ಲಿ ಪ್ರಾಧಿಕಾರ ಮೆಸ್: ಎಸ್.ಎಸ್.ಕಂಡ್ರಿ ಗುತ್ತಿಗೆದಾರರು ಇವರಿಗೆ ಬುಡಾ ಸಿ.ಕಂ. 35/43+43ಎ ರಾಮತೀರ್ಥನಗರ ಯೋಜನೆ 56 ಕುಮಾರ ಸ್ವಾಮಿ ಲೇಔಟ್ ಹಾಗೂ ಬುಡಾ ಕಚೇರಿ ಆವರಣದ ಬೀದಿ ದೀಪ ನಿರ್ವಹಣೆ ಕುರಿತು ಮೇ 2017 ಮಾರ್ಚ 18 ಸಂದಾಯ ಮಾಡಿದ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಿವರ	ದಿನಾಂಕ	ಅವಧಿ	ಮೊತ್ತ
1	39	19.07.2017	ಮೇ	87833
2			ಜೂನ	87833
3	26	18.09.2017	ಸೆಪ್ಟೆಂಬರ್	87833
4	26/1	18.09.2017	ಸೆಪ್ಟೆಂಬರ್	87833
5	27	27.10.2017	ಅಕ್ಟೋಬರ್	87833
6	27/1	27.10.2017	ಅಕ್ಟೋಬರ್	87833
7	95	05.01.2018	ಜನೇವರಿ	87833
8	5/1	05.01.2018	ಜನೇವರಿ	87833
9	33	23.02.201	ಫೆಬ್ರವರಿ	87833
10	33/1	23.02.2018	ಫೆಬ್ರವರಿ	87833
11	25	13.06.2018	ಜೂನ	87833
12	25/1	13.06.2018	ಜೂನ	87833
		ಒಟ್ಟು		1053996

ರೂ.10,53,996/– ಗಳನ್ನು ಸದರಿ ಕಾರ್ಯನಿರ್ವಹಣೆ ಕುರಿತು ವರ್ಕ ಆರ್ಡರ್ ಸಂಖ್ಯೆ: ಬುಡಾ /ಪಿಡಬ್ಲುಡಿ/ ಟೆಂಡರ್/ಡಬ್ಲುಓ/2017–18/279 ದಿನಾಂಕ: 25.04.2017ರ ಪ್ರಕಾರ ರೂ.10,54,000/– ಗಳಿಗೆ ಟೆಂಡರ್ ಒಪ್ಪಂದ ಪ್ರಕಾರ ಈ ಮೇಲಿನ ಮೊತ್ತ ಸಂದಾಯ ಮಾಡಿದ್ದು, ಕಂಡು ಬಂದ ನ್ಯೂನತೆಗಳು ಈ ಕೆಳಗಿನಂತಿದೆ.

1) ಕರ್ನಾಟಕ ಪಾರದರ್ಶಕ ಕಾಯ್ದೆ 1999 ನಿಯಮ 4 ಈ ಪ್ರಕಾರ ಒಂದು ಲಕ್ಷ ಮೇಲ್ಪಟ್ಟ ದರ ಪಟ್ಟಿ ಸೇವೆಗಳಿಗೆ ಟೆಂಡರ್ ಆಹ್ವಾನಿಸುವುದು. ಕಡ್ಡಾಯ ಹಾಗೂ 18ಎ ಪ್ರಕಾರ ಇ ಪ್ರಕ್ಯೂರಮೆಂಟ್ ಪ್ರಕಾರ ಮೂಲಕ ಸೇವೆಯನ್ನು ಪಡೆಯಬೇಕಾದ್ದು, ಅಗತ್ಯ ಟೆಂಡರ್ ದಾಖಲೆಗಳು ಹಾಜರುಪಡಿಸಿಲ್ಲ.

2) ಟೆಂಡರ್ ಆಹ್ವಾನಿಸಿದ ಪತ್ರಿಕಾ ಪ್ರಕಟಣೆಗಳು 2016–17ನೇ ಸಾಲಿನ ಸಂಬಂಧಿಸಿದ್ದು, 2017–18ನೇ ಸಾಲಿನ ಪತ್ರಿಕೆ ಪ್ರಕಟಣೆ ಮಾಡಿದ್ದರ ಬಗ್ಗೆ ಕಡತದಲ್ಲಿ ದಾಖಲೆ ಹಾಜರುಪಡಿಸಿಲ್ಲ.

3) ವಿತಕರು ಬೀದಿ ದೀಪ ನಿರ್ವಹಣೆಯ ಕುರಿತು ಸಾರ್ವಜನಿಕ ದೂರು ಹಾಗೂ ಸಾಮಗ್ರಿ ಬದಲಾವಣೆಗಾಗಿ ನಿಗದಿಪಡಿಸಿದ ನಮೂನೆ ಮಾತ್ರ ಲಭ್ಯ ಇದ್ದು ಸ್ಟಾಕ್ ರಜಿಸ್ಟರ್ ಹಾಜರುಪಡಿಸಿರುವುದಿಲ್ಲ.

ಈ ಬಗ್ಗೆ ನೀಡಲಾದ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:19 ದಿನಾಂಕ:19.01.2019 ಕ್ಕೆ ಪ್ರಾಧಿಕಾರದಿಂದ ಉತ್ತರ ನೀಡಿರುವುದಿಲ್ಲ. ಕಾರಣ ಸಮರ್ಥನೀಯವಾದ ಅನುಸರಣೆಯೊಂದಿಗೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸುವವರೆಗೆ ಬೀದಿ ದೀಪಗಳಿಗೆ ಪಾವತಿಸಿದ ಮೊತ್ತ ರೂ.1053996/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

39) ಉತ್ತಮತೆ ಶುಲ್ಕ ವಸೂಲಿಯಲ್ಲಿ ನಷ್ಟ ಉಂಟುಮಾಡಿರುವ ಬಗ್ಗೆ :

2017–18 ನೇ ಸಾಲಿನಲ್ಲಿ ಪ್ರಾಧಿಕಾರ ಖಾಸಗಿ ನಿವೇಶನಗಳ ಲೇಔಟ್ (Layout) ಹಾಗೂ ಏಕ ನಿವೇಶನ ಲೇಔಟ್ ಅನುಮೋದಿಸಿದ್ದು, ಈ ಕೆಳಕಂಡ ಮೊತ್ತವನ್ನು ಸ್ವೀಕೃತಗೊಂಡಿದೆ. (Receipt & Payment ತಖ್ತೆ ಪ್ರಕಾರ)

1)	Scrutiny Fees	– Rs.85,600/-
2)	Bettermant Levy	– Rs.25,52,831/-
3)	Supervision charges on Pvt. Layout	– Rs.1,16,73,365/-
	ಒಟ್ಟು	– Rs. 1,43,11,796/-

Karnataka Country and Town Planning Act–**1961** ರ ಸೆಕ್ಷನ್ **18** ರನ್ವಯ ಖಾಸಗಿ ಭೂ ಅಭಿವೃದ್ಧಿಕಾರಿಂದ ವಸತಿ ಉದ್ದೇಶಕ್ಕಾಗಿ ನಿರ್ಮಿಸಿರುವ ಬಡಾವಣೆಗಳಿಗೆ ನೊಂದಣಿ ಅಧಿಕಾರಿಗಳ ಮಾರ್ಗಸೂಚಿ ದರದಂತೆ ಲಾಭಾಂಶದಲ್ಲಿ ಬರುವ **1/3** ಭಾಗವನ್ನು ಉತ್ತಮತೆಯ ಶುಲ್ಕವನ್ನಾಗಿ ವಸೂಲಿ ಮಾಡಿ ಪ್ರಾಧಿಕಾರದ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ **2017–18**ನೇ ಸಾಲಿನಲ್ಲಿ ಲೇಔಟ್ ಮಂಜೂರಾತಿಯನ್ನು ನೀಡುವ ಸಂದರ್ಭದಲ್ಲಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಪ್ರಕರಣ **18** ರಂತೆ ಉಪನೊಂದಾಣಾಧಿಕಾರಿಗಳು ನಿರ್ಧರಿಸಿದ ಮಾರುಕಟ್ಟೆ ಮೌಲ್ಯದೊಂದಿಗೆ ಭೂಪರಿವರ್ತನೆಗೆ ಮುಂಚೆ ಭೂಮಿಯನ್ನು ಕೊಂಡ ಮೌಲ್ಯ ಮತ್ತು ಲೇಔಟ ಅಭಿವೃದ್ಧಿಯ ವೆಚ್ಚ ಸೇರಿದಂತೆ **1/3** ರಷ್ಟು ಅಬಿವೃದ್ಧಿ ಶುಲ್ಕವನ್ನು ವಸೂಲಿಸಬೇಕಾಗಿತ್ತು. ಆದರೆ ಆ ರೀತಿಯ ಕ್ರಮ ಅನುಸರಿಸದೆ ಉತ್ತಮತೆಯ ಶುಲ್ಕ **1)**ವಸತಿ–ರೂ.**4.00**/– per Sq.mtr. **2)** ಕೈಗಾರಿಕಾ–ರೂ. **8.00**/– per Sq.mtr. **3)** ವಾಣಿಜ್ಯ – ರೂ. **12.00**/– per Sq.mtr. ಈ ರೀತಿ ಲೆಕ್ಕ ಹಾಕಿ ವಸೂಲಿಸಲಾಗಿದೆ. ಪ್ರಾಧಿಕಾರದಿಂದ **29** ಪ್ರಕರಣಗಳನ್ನು ಅನುಮೋದನೆ ನೀಡಲಾಗಿದ್ದು, ಅದರಲ್ಲಿ **3** ಏಕನಿವೇಶನ, **3** ಬಹು ನಿವೇಶನ ಲೇಔಟ್‌ಗಳನ್ನು ಉತ್ತಮತೆ ಶುಲ್ಕ ಲೆಕ್ಕಾಚಾರಕ್ಕೆ ಉದಾಹರಣೆಯಾಗಿ ಪರಿಗಣಿಸಿದ್ದು, ಈ **6** ಪ್ರಕರಣಗಳಲ್ಲಿ ಪ್ರಾಧಿಕಾರಕ್ಕೆ ಉಂಟಾದ ನಷ್ಟದ ಮೊತ್ತ ರೂ. **9,51,50,402**/– ಗಳಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಲೇಔಟ ಅನುಮೋದನೆ ನೀಡಿದವರೇ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಈ ಮೊತ್ತವನ್ನು ಆಕ್ಷೇಪಣೆಯಲ್ಲಿ ಇರಿಸಲಾಗಿದೆ. ಕಾರಣ ಪ್ರಾಧಿಕಾರವು ಈ ಬಗ್ಗೆ ಪರಿಶೀಲಿಸಿ, ಉತ್ತಮತೆ ಶುಲ್ಕವನ್ನು ನಿಖರವಾಗಿ ಲೆಕ್ಕ ಹಾಕಿ ವಸೂಲಿಸಿ ಅರ್ಥಿಕ ಸದೃಢತೆಯನ್ನು ಹೊಂದುವುದು ಅತ್ಯಗತ್ಯ ಎಂದು ಅಭಿಪ್ರಾಯಿಸಿದೆ. ಆರು ಪ್ರಕರಣಗಳ ವಿವರಗಳನ್ನು ಅನುಬಂಧ–**10** ರಲ್ಲಿ ವಿವರಿಸಿದೆ.

40) ಪ್ರಾಧಿಕಾರದ ಆಸ್ತಿ ರಜಿಸ್ಟರ್ ಬಗ್ಗೆ :–

ಪ್ರಸಕ್ತ ಸಾಲಿನಲ್ಲಿ ಪ್ರಾಧಿಕಾರದ ವಶದಲ್ಲಿರುವ ವಾಣಿಜ್ಯ ಮಳಿಗೆಗಳು ಸಮುದಾಯ ಭವನ, ಖಾಲಿನಿವೇಶನಗಳು ಮುಂತಾದ ಆಸ್ತಿಗಳ ಕ್ರೋಡಿಕರಿಸಿದ ರಜಿಸ್ಟರನ್ನು ನಿರ್ವಹಿಸಲಾಗಿದ್ದು, ಆದರೆ ಈ ಆಸ್ತಿವಹಿಯು ಪ್ರಾಧಿಕಾರದ ಎಲ್ಲ ಆಸ್ತಿಗಳನ್ನು ಒಳಗೊಂಡಿರುವುದಿಲ್ಲವೆಂದು **2015–16**ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾಗಿತ್ತು. ಆದರೆ ಪ್ರಸಕ್ತ ಸಾಲಿನಲ್ಲಿ ಸಹಾ ಸದರಿ ವಹಿಗಳನ್ನು ಕಾಲೋಚಿತಗೊಳಿಸಿ ಹಾಜರುಪಡಿಸಿರುವುದಿಲ್ಲ. ಕಾರಣ ಹಿಂದಿನ ಸಾಲಿನ ಅಂಕಿ ಅಂಶಗಳನ್ನೇ ಮುಂದುವರಿಸಲಾಗಿದೆ.

ಕ್ರ.ಸಂ.	ಪ್ರಾಧಿಕಾರ ಆಸ್ತಿಗಳ ಹೆಸರು	ಸಂಖ್ಯೆ	ಮೊತ್ತ (ಲಕ್ಷ ರೂ.ಗಳಲ್ಲಿ)
1	ನಾಗರೀಕ ಸೌಲಭ್ಯಗಳ ನಿವೇಶನಗಳು.	26	2353.36
2	ಯೋಜನೆ ಸಂಖ್ಯೆ 6–2ನೇ ಹಂತದಲ್ಲಿಯ ಅಂಶಗಳು.	6	35.00
3	ಯೋಜನೆ ಸಂಖ್ಯೆ 13 ರಲ್ಲಿ ವಾಣಿಜ್ಯ ಮಳಿಗೆಗಳು.	23	64.00
4	ಆಡಳಿತ ಕಟ್ಟಡ ಸಿಬ್ಬಂದಿ ವಸತಿ ಗೃಹ	1	36.25
5	ಆಯುಕ್ತರ ವಸತಿ ಗೃಹ.	1	25.00
	ಒಟ್ಟು ಆಸ್ತಿಗಳು	57	2513.61

41) ಚಿರಾಸ್ತಿಗಳ ಭೌತಿಕ ಪರಿಶೀಲನೆ ಕುರಿತು:

ಸಂಸ್ಥೆಯ ಚಿರಾಸ್ತಿಗಳ ಕುರಿತು ರಜಿಸ್ಟರ ನಿರ್ವಹಿಸಿ ಲೆಕ್ಕಪರಿಶೋದನೆಗೆ ಹಾಜರುಪಡಿಸಿರುವುದಿಲ್ಲ. ಇಲಾಖಾ ನಿಯಮಾವಳಿಗಳ (ಡಿ.ಕೋಡ್) ಪ್ರಕಾರ ಆಯುಕ್ತರು ವಷಾಂತ್ಯಕ್ಕೆ ಸದರೀ ಚಿರಾಸ್ತಿಗಳ ಹಾಗೂ ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ ಕೈಗೊಂಡು, ವರ್ಷದ ಕೊನೆಗೆ ಪ್ರಮಾಣೀಕರಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

42) ಸೂಟ ರಜಿಸ್ಟರ ಕುರಿತು:–

ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ನ್ಯಾಯಲಯ ಪ್ರಕರಣಗಳ ಕುರಿತು ಸೂಟ ರಜಿಸ್ಟರ್ ನಿರ್ವಹಿಸಿಲ್ಲ. ಸದರಿ ವಹಿಯನ್ನು ಕಡ್ಡಾಯವಾಗಿ ನಿರ್ವಹಿಸಲು ಸೂಚಿಸಿದೆ. ಪ್ರಾಧಿಕಾರದಿಂದ ಲೆಕ್ಕ ಪರಿಶೋಧನೆಗೆ ಸಲ್ಲಿಸಿದ ಮಾಹಿತಿಯಂತೆ ಒಟ್ಟು 124 ಪ್ರಕರಣಗಳು ಬಾಕಿ ಇದ್ದು, ವಿವರಗಳನ್ನು ಶಾಖಾವಾರು ಅನುಬಂಧ– 11 ರಲ್ಲಿ ತಯಾರಿಸಿ ವರದಿಗೆ ಲಗತ್ತಿಸಿದೆ.

43) ಅಧಿಕಾರಿ ಮತ್ತು ಸಿಬ್ಬಂದಿಗಳ ಮಂಜೂರಾದ ಹುದ್ದೆಗಳ ಸಂಖ್ಯೆ ಕುರಿತು :–

ಸದರಿ ಪ್ರಾಧಿಕಾರದಲ್ಲಿ ಮಂಜೂರಾದ ಮತ್ತು ಸೇವೆ ಸಲ್ಲಿಸುತ್ತಿರುವ ಹಾಗೂ ಖಾಲಿ ಉಳಿದಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರವನ್ನು 'ಅನುಬಂಧ–12 ರಲ್ಲಿ ತಯಾರಿಸಿ ಈ ವರದಿಗೆ ಲಗತ್ತಿಸಿದೆ.

44) ವೇತನ ಕಡಿತ ಕುರಿತು ಸಿಬ್ಬಂದಿ ಶಾಖೆಯಲ್ಲಿ ವಹಿ ನಿರ್ವಹಿಸದೆ ಇರುವ ಕುರಿತು:–

ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ಶಾಖೆಯ ದಾಖಲೆಗಳನ್ನು ಪರಿಶಿಲಿಸಲಾಗಿ ಅಧಿಕಾರಿ/ಸಿಬ್ಬಂದಿ ಯವರ ವೇತನದಲ್ಲಿ ಕಡಿತಗೊಳಿಸಲಾದ ಜೀವವಿಮೆ, ಸಾಮಾನ್ಯ ಭವಿಷ್ಯ ನಿಧಿ ಮತ್ತು ಕೆ.ಜಿ.ಆಯ್.ಡಿ. ಸಾಲಗಳ ಕುರಿತು ವಿವರವಾದ ಕಡಿತಗಳ ವಹಿಯನ್ನು ನಿರ್ವಹಿಸಿರುವುದಿಲ್ಲ. ಇದರಿಂದ ನೌಕರರಿಂದ ವಸೂಲಾಗದೆ, ಬಾಕಿ ಉಳಿದ ಮೊತ್ತ ಎಷ್ಟು ಎಂಬ ಬಗ್ಗೆ ತಿಳಿಯುವುದು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಈ ಕುರಿತು ತ್ವರಿತ ಕ್ರಮ ಜರುಗಿಸಿ ಮುಂದಿನ ಲೆಕ್ಕ ಪರಿಶೋಧನೆಗೆ ದಾಖಲೆಗಳನ್ನು ಹಾಜರು ಪಡಿಸಲು ಸೂಚಿಸಲಾಗಿದೆ.

45) ಪಿಂಚಣಿ ಮತ್ತು ರಜಾ ವೇತನ ವಂತಿಗೆ ಕುರಿತು :–

ಕರ್ನಾಟಕ ನಾಗರಿಕ ಸೇವಾ ನಿಯಮ 427 (ಎ) ರ ಪ್ರಕಾರ ನಿವೃತ್ತಿ ವೇತನ ಮತ್ತು ರಜೆಯ ವೇತನ ಸಲುವಾಗಿ ಅಂಶದಾನಗಳನ್ನು ಈ ಮುಂದೆ ತಿಳಿಸಿರುವ ದರಗಳಲ್ಲಿ ಲೆಕ್ಕಹಾಕಬೇಕು.

	ರಜಾ ಭತ್ಯಕ್ಕೆ	ನಿವೃತ್ತಿ ವೇತನಕ್ಕೆ
ಗೆಜೆಟೆಡ ನಾನ್ ಗೆಜೆಟೆಡ ಸರ್ಕಾರಿ ನೌಕರರು	ಅನ್ಯ ನಿಯೋಜಕರಲ್ಲಿ ಪಡೆದ ವೇತನದ 11% ರಷ್ಟು	ಸರ್ಕಾರದಲ್ಲಿ ಪಡೆದ ವೇತನದ 1/8 ಭಾಗದಷ್ಟು

ಅದರಂತೆ 2017–18 ನೇ ಸಾಲಿನ ಪಿಂಚಣಿ ಮತ್ತು ರಜಾವೇತನ ವಂತಿಗೆಗಳ ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ.	ಪ್ರಾಧಿಕಾರ ಆಸ್ತಿಗಳ ಹೆಸರು	ಸಂಖ್ಯೆ	ಮೊತ್ತ (ಲಕ್ಷ ರೂ.ಗಳಲ್ಲಿ)
1	01–04–2017 ಕ್ಕೆ ಇದ್ದಂತೆ ಬಾಕಿ ಮೊತ್ತ	863766	760116
2	2017–18 ನೇ ಸಾಲಿನ ಮೊತ್ತ	131325	115567
3	ಒಟ್ಟು	995091	875683
4	2017–18 ನೇ ಸಾಲಿನಲ್ಲಿ ಚಾಲ್ತಿಯೊಂದಿಗೆ ಬಾಕಿ ಹಣದ ಸಂದಾಯದ ವಿವರ	131325	115567
5	31–03–2018 ಕ್ಕೆ ಬಾಕಿ	863766	760116

